SHANKARA SHANTHI SANDESHA RNI Reg. No. : KARKAN/2010/35307
**Sri Sri Swamy Prabhodanandaji**, Sri Shankara Shanthi Sandesha, Shankarananda Ashrama, 10th Cross, Ullala Main Road, Sri Hari Layout, Gnanabharati Post, Bengaluru 560 056. Cell: 94491 58587.

# ಆಶ್ರಮದ ವಾರ್ತೆಗಳು

1. ಆಶ್ರಮದಲ್ಲಿ ನಿತ್ಯ ಉದಯ ಹಾಗೂ ಸಂಜೆ ಓಂಕಾರೇಶ್ವರನಿಗೆ ಅಷ್ಟೋತ್ತರ ಪೂಜೆ ಗೀತಾ ಪಾರಾಯಣಾದಿಗಳು ನಡೆಯುತ್ತಾ ಇದೆ.

2) ಜುಲೈ 24 ಶನಿವಾರದಂದು ಶ್ರೀಗುರು (ವ್ಯಾಸ) ಪೂರ್ಣಿಮೆ ವಿಶೇಷ ಕಾರ್ಯಕ್ರಮವಿದೆ. ಆ ದಿನ ಉದಯ ಅಷ್ಟೋತ್ತರ ಪೂಜೆ, ಓಂಕಾರೇಶ್ವರನಿಗೆ ಪಂಚಾಮೃತ ಅಭಿಷೇಕ ಹಾಗೂ ಶ್ರೀಮದ್ಭಗವದ್ಗೀತಾ ಸಾಮೂಹಿಕ ಪಾರಾಯಣವಿದೆ. 11 ರಿಂದ 2 ಗಂಟೆಯವರೆಗೆ ಶ್ರೀ ಮದ್ಭಗವದ್ಗೀತಾ 18 ಅಧ್ಯಾಯ ಗೀತಾ ಪುರಶ್ಚರಣೆ (ಮಾನಸಿಕ), ತದನಂತರ ಮಹಾತ್ಮರುಗಳಿಂದ ಶ್ರೀ ಗುರು (ವ್ಯಾಸ) ಹುಣ್ಣಿಮೆ ಬಗ್ಗೆ ವಿಶೇಷ ಪ್ರವಚನವಿದೆ. ನಂತರ ಪ್ರಸಾದ ವಿನಿಯೋಗವಿರುವುದು. ಸರ್ವರೂ ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವಕಾಶವಿದೆ.

3) ಶ್ರಾವಣ ಶುದ್ಧ ತ್ರಯೋದಶಿ, ಚತುರ್ದಶಿ ಹಾಗೂ ಹುಣ್ಣಿಮೆಯಂದು ಆಗಸ್ಟ್ 20 ರಿಂದ 22 ರ ವರೆಗೆ ಶ್ರೀ ಶಂಕರಾನಂದಾಶ್ರಮದಲ್ಲಿ ಶ್ರೀ ಶಿವಪಂಚಾಕ್ಷರಿ ಜಪಯಜ್ಞ ಕಾರ್ಯಕ್ರಮವಿದೆ. ಆಸಕ್ತರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಪರಶಿವನ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.

4) ಶ್ರಾವಣ ಬಹುಳ ಅಷ್ಟಮಿ ಅಂದರೆ ಆಗಸ್ಟ್ 30ರಂದು ಶ್ರೀ ಕೃಷ್ಣಜನ್ಮಾಷ್ಟಮಿ ಕಾರ್ಯಕ್ರಮದ ಪ್ರಯುಕ್ತ ದಿನ ಪೂರ್ತಿ ಆಶ್ರಮದಲ್ಲಿ ವಿಶೇಷ ಕಾರ್ಯಕ್ರಮವಿದೆ. ಭಗವದ್ಭಕ್ತರು ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಶ್ರೀ ಕೃಷ್ಣ ಭಗವಂತನ ಕೃಪೆಗೆ ಪಾತ್ರರಾಗಿ.

5) ಆಷಾಢ ಶುದ್ಧ ಅಷ್ಟಮಿ ಅಂದರೆ ಜುಲೈ 17 ರಿಂದ ದಕ್ಷಿಣಾಯನ–ಪುಣ್ಯಕಾಲ ಆರಂಭ ಹಾಗೂ ಚಾತುರ್ಮಾಸ್ಯ ವ್ರತ (4 ತಿಂಗಳು) ಪ್ರಾರಂಭ.

6) ಆಗಸ್ಟ್ 8ರಂದು (ಆಷಾಢ ಬಹುಳ ಅಮವಾಸ್ಯೆ) ಭೀಮನ ಅಮವಾಸ್ಯೆ,
ಆಗಸ್ಟ್ 13ರಂದು (ಶ್ರಾವಣ ಶುದ್ಧ ಪಂಚಮಿ) ನಾಗಪಂಚಮಿ.
ಆಗಸ್ಟ್ 20ರಂದು (ಶ್ರಾವಣ ಶುದ್ಧ ತ್ರಯೋದಶಿ) ವರಮಹಾಲಕ್ಷ್ಮೀ ವ್ರತ

7) ಆಗಸ್ಟ್ 20ರಂದು (ಶ್ರಾವಣ ಶುದ್ಧ ಹುಣ್ಣಿಮೆ) ಯಜುರ್ ಉಪಾಕರ್ಮ ಹಾಗೂ ರಕ್ಷಾಬಂಧನ.

**ಸರ್ವರಿಗೂ ಆದರದ ಸ್ವಾಗತ.**

ಓಂ ಶಾಂತಿಃ ಶಾಂತಿಃ ಶಾಂತಿಃ

Printed, Published and Owned by **Sri Swamy Prabhodananda.**Published by **Sri Swamy Prabhodananda.**, owned by **Sri Swamy Prabhodananda.**, printed at Sri Yanthrodharaka, Printers and Publishers, 10/2, 1st Main, Aswathkatte Road. Rudrappa Garden, Bangalore - 560 026. Mob: 98860 71144 / 94487 95121
Editor **Sri Swamy Prabhodananda.**

ಓಂ
ನಮೋ ಭಗವತೇ ಶಂಕರಾನಂದಾಯ
ನಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ

# ಶಂಕರ ಶಾಂತಿ ಸಂದೇಶ

ದ್ವೈಮಾಸಿಕ ಆಧ್ಯಾತ್ಮಿಕ ಪತ್ರಿಕೆ

ಸಂಪುಟ 16 ಸಂಚಿಕೆ 1 ಜುಲೈ–ಆಗಸ್ಟ್ 2021

ಶ್ರೀ ಶಿವ ಪಂಚಾಕ್ಷರಿ ಜಪಯಜ್ಞ ಮಹೋತ್ಸವದ ವಿಶೇಷ ಸಂಚಿಕೆ



ಶ್ರೀ ಶಂಕರಾನಂದ ಆಶ್ರಮ ಟ್ರಸ್ಟ್ (ರಿ).
ಶ್ರೀಹರಿ ಬಡಾವಣೆ, ಜ್ಞಾನಜ್ಯೋತಿನಗರ
ಜ್ಞಾನಭಾರತಿ ಅಂಚೆ, ಬೆಂಗಳೂರು – 560 056

ಓಂ ನಮೋ ಭಗವತೇ ಶಂಕರಾನಂದಾಯ

# ನಿ ವೇ ದ ನೆ

**ಓಂಕಾರ ರೂಪ ದೇವೇಶ ಅವಸ್ಥಾತ್ರಯ ಸಾಕ್ಷಿಣೇ ।**
**ನಿರ್ಮಲಾಯ ಪ್ರಶಾಂತಾಯ ತಸ್ಮೈಶ್ರೀ ಗುರುವೇ ನಮಃ ॥**

**– ಗೀತಾಶಂಕರ್, ಬೆಂಗಳೂರು**

ಆತ್ಮೀಯರೇ !

ಪ್ರಪಂಚದ ಸರ್ವಮಾನವರನ್ನು ಮೂರು ವಿಧವಾಗಿ ವಿಂಗಡಿಸಬಹುದು. ಕೆಲವರು ದೇಹ ದೃಷ್ಟಿಯುಳ್ಳವರು; ಕೆಲವರು ಮನೋದೃಷ್ಟಿ ಉಳ್ಳವರು ; ಕೆಲವರು ಆತ್ಮ ದೃಷ್ಟಿ–ವುಳ್ಳವರು ; ಇವರಲ್ಲಿ ದೇಹ ದೃಷ್ಟಿ ಉಳ್ಳವರು ಅಧಮರು ; ಇವರು ಒಂದು ಪ್ರಾಣಿಯ ದೇಹ ಸೌಂದರ್ಯ ಮಾತ್ರ ನೋಡುತ್ತಾರೆ. ಇನ್ನು ಮನೋದೃಷ್ಟಿ ಉಳ್ಳವರು ಮಧ್ಯಮರು; ಇವರು ಮನೋಭಾವವನ್ನೂ, ವಿದ್ಯೆಯನ್ನೂ, ಕವಿತ್ವವನ್ನೂ ನೋಡುತ್ತಾರೆ. ಆತ್ಮ ದೃಷ್ಟಿವುಳ್ಳವರು ಯಾವ ಪ್ರಾಣಿಯನ್ನು ನೋಡಿದರೂ ದೇಹ ಮತ್ತು ಮನಸ್ಸನ್ನು ನೋಡದೆ ಅಧಿಷ್ಠಾನವಾದ ಆತ್ಮವನ್ನೇ ನೋಡುತ್ತಾರೆ. ಇಂತಹ ಆತ್ಮ ದೃಷ್ಟಿ ಉಳ್ಳವರನ್ನೇ ಸಮಭಾವವುಳ್ಳವರೆನ್ನುತ್ತಾರೆ.

ಒಂದೇ ಒಂದಾದ ವಿದ್ಯುತ್ ಸರ್ವ ಬಲ್ಬುಗಳಲ್ಲಿ ಬೆಳಗುವಂತೆ, ಒಂದೇ ಒಂದಾದ ಆತ್ಮವು ಸಮಸ್ತ ಚರಾಚರ ಪ್ರಾಣಿಕೋಟಿಯಲ್ಲಿ ಪ್ರಸರಿಸಿದೆ ಎಂದು ತಿಳಿಯುವುದೇ ವಿಶಾಲ ಭಾವನೆ ; ಇದೇ ಆತ್ಮದೃಷ್ಟಿ. ಇಂತಹ ಆತ್ಮದೃಷ್ಟಿಯನ್ನು ಸರ್ವರೂ ಸಂಪಾದಿಸಿಕೊಂಡರೆ ಮತ್ತೊಬ್ಬರ ಮೇಲೆ ದ್ವೇಷ ಅಸೂಯೆ ಇತ್ಯಾದಿ ಯಾವುದು ಹುಟ್ಟುವುದಿಲ್ಲ. ಯಾವ ಪ್ರಾಣಿಯನ್ನು ನೋಡಿದರೂ ಒಳಗಿನ ಆತ್ಮನನ್ನು ನೋಡುವ ಅಭ್ಯಾಸವಿರಬೇಕು. ಒಂದು ಮೋಟಾರು ಚಲಿಸುತ್ತದೆ ಎಂದರೆ ಆ ಜಡವಾದ ಮೋಟಾರು ಚಲಿಸಲಾರದು. ಒಳಗೆ ಒಬ್ಬ ಚಿನ್ಮಯ ಮೂರ್ತಿ ಇದ್ದಾನೆಂದು ತಿಳುವಳಿಕೆಯು ಹೇಗೆ ಸತ್ಯವೋ ಹಾಗೆಯೇ, ಯಾವ ಪ್ರಾಣಿಯು ಚಲಿಸಿದರೂ ಒಳಗೆ ಒಬ್ಬ ಚೇತನ ಭೂತನಾದ ಆತ್ಮ ಇದ್ದಾನೆಂದು ತಿಳಿಯುವುದೇ ಮಾನವನ ಮುಖ್ಯ ತಿಳುವಳಿಕೆ. ಆಗ ಸರ್ವ ಪ್ರಾಣಿಕೋಟಿಗಳಲ್ಲಿ ಪರಿಪೂರ್ಣವಾದ ದಯೆಯು ಉದಯಿಸಬಲ್ಲುದು. ಜಗತ್ತಿನ ಸರ್ವ ಮಾನವರನ್ನು ಸಹೋದರರ ಭಾವದಿಂದ ನೋಡುವುದು ಶ್ರೇಷ್ಠವಾದ ತತ್ತ್ವವೆ. ಆದರೆ ಇದು ಭಾರತೀಯ ಧರ್ಮವಲ್ಲ ; ಇದಕ್ಕಿಂತಲೂ ನಮ್ಮ ಭಾರತೀಯ ಧರ್ಮ ಒಂದು ಹೆಜ್ಜೆ ಮುಂದೆ ಹೋಗಿದೆ. ಎಲ್ಲೆಲ್ಲಿಯೂ ಸರ್ವಾತ್ಮ ಭಾವವನ್ನು ಬೆಳೆಸಿಕೊಳ್ಳಬೇಕು. **"ಆತ್ಮವತ್ ಸರ್ವಭೂತಾನಿ"** ಸರ್ವಪ್ರಾಣಿಗಳಲ್ಲಿ ತನ್ನನ್ನೇ ನೋಡಬೇಕು. ಇದೇ ಭಾರತೀಯ ಧರ್ಮ. ಆದ್ದರಿಂದ ಭಾರತೀಯ ಧರ್ಮವೇ ವಿಶ್ವಧರ್ಮ ಎಂದು

**"ಜ್ಞಾನಾಗ್ನಿ ಸರ್ವಕರ್ಮಾಣಿ ಭಸ್ಮಸಾತ್ ಕುರುತೇ ತಥಾ"**
ಜ್ಞಾನವೆಂಬ ಅಗ್ನಿಯು ಸರ್ವಕರ್ಮಗಳನ್ನು ಸುಟ್ಟು ಬೂದಿ ಮಾಡುತ್ತದೆ (ಗೀ–4–22)



ಮಾನ್ಯವಾಗಿರುವುದು. ಇಂತಹ ವಿಶ್ವ ಪ್ರೇಮವನ್ನು ಬೋಧಿಸುವ ಭಗವದ್ಗೀತೆಯ 5–19ನೇ ಶ್ಲೋಕವನ್ನು ಈ ದಿವಸ ಈ ಶಂಕರ ಶಾಂತಿ ಸಂದೇಶದ ಮೂಲಕ ವಿಚಾರ ಮಾಡೋಣ : –

**ಇಹೈವ ತೈರ್ಜಿತಃ ಸರ್ಗೋ ಯೇಷಾಂ ಸಾಮ್ಯೇ ಸ್ಥಿತಂ ಮನಃ ।**
**ನಿರ್ದೋಷಂ ಹಿ ಸಮಂ ಬ್ರಹ್ಮ ತಸ್ಮಾದ್ಬ್ರಹ್ಮಣಿ ತೇ ಸ್ಥಿತಾಃ ॥**

**ತಾತ್ಪರ್ಯ :** ಯಾರ ಮನಸ್ಸು, ಆತ್ಮನು ಸರ್ವ ಪ್ರಾಣಿಗಳಲ್ಲಿಯೂ ಸಮವಾಗಿರುವನೆಂಬ ಭಾವದಲ್ಲಿ ಸ್ಥಿರವಾಗಿರುವುದೋ ಅಂತವರು ಇಲ್ಲಿಯೇ ಈ ಜನ್ಮದಲ್ಲಿಯೇ ಈ ಜನನ ಮರಣ ರೂಪವಾದ ಈ ಮೃತ್ಯು ಸಂಸಾರವನ್ನು ಜಯಿಸುತ್ತಾರೆ. ಏಕೆಂದರೆ ಬ್ರಹ್ಮವು ನಿರ್ದೋಷವಾದುದು ; ಸಮವಾದುದು ; ಆದುದರಿಂದ ಅಂತಹ ಬ್ರಹ್ಮವೇ ತಾನೆಂದು ತಿಳಿದುಕೊಂಡ ಮಹನೀಯರು ಬ್ರಹ್ಮಸ್ವರೂಪದಲ್ಲಿಯೇ ಇರುತ್ತಾರೆ.

ಇದು ಭಗವದ್ಗೀತೆಯ ಮಹತ್ತರವಾದ ಶ್ಲೋಕ. ಸಂಸಾರ ಸಾಗರವನ್ನು ಸುಲಭೋಪಾಯದಿಂದ ದಾಟಿಸುವ ಶ್ಲೋಕ. ಇದನ್ನು ಸಂಕ್ಷಿಪ್ತವಾಗಿ ವಿಚಾರ ಮಾಡೋಣ. ಮನುಷ್ಯನ ಸುಖಕ್ಕೂ, ದುಃಖಕ್ಕೂ, ಮುಕ್ತಿಗೂ ಈ ಮನಸ್ಸೆ ಕಾರಣ. ಅದು ಹೇಗೆಂದರೆ,

**ಮನ ಏವ ಮನುಷ್ಯಾಣಾಂ ಕಾರಣಂ ಬಂಧ ಮೋಕ್ಷಯೋಃ ।**
**ಬಂಧಂಚ ವಿಷಯಾಸಕ್ತಂ ಮೋಕ್ಷಂ ನಿರ್ವಿಷಯಾಂ ಸ್ಮೃತಾ ॥**

ಮನಸ್ಸೇ ಮನುಷ್ಯನ ಬಂಧಕ್ಕೂ ಕಾರಣ ಮತ್ತು ಮೋಕ್ಷಕ್ಕೂ ಕಾರಣ – ಪ್ರಪಂಚದ ವಿಷಯಗಳ ಆಕಾಂಕ್ಷೆಯಿಂದ ಹಣ–ಬಂಗಾರ–ಆಸ್ತಿ ಮನೆ–ಮಠ ಇತ್ಯಾದಿ ವಿಷಯ–ಗಳಲ್ಲೇ ಸದಾ ತಲ್ಲೀನವಾದ ಮನಸ್ಸು ಮನುಷ್ಯನ ಬಂಧನಕ್ಕೆ ಕಾರಣವಾಗುತ್ತದೆ. ಯಾವ ಮನಸ್ಸು ಪ್ರಾಪಂಚಿಕ ವಿಷಯದಲ್ಲಿದ್ದರೂ ತಾವರೆ ಕಮಲವು ಹೇಗೆ ನೀರಿನಲ್ಲಿದ್ದರೂ ನೀರನ್ನೂ ಅಂಟಿಸಿಕೊಳ್ಳುವುದಿಲ್ಲವೋ ಹಾಗೆ ಮನಸ್ಸು ಸಂಸಾರದಲ್ಲಿದ್ದರೂ ಸಂಸಾರದ ಮೋಹಕ್ಕೆ ಗಂಟು ಬೀಳುವುದಿಲ್ಲವೋ ಅಂತಹ ಮನಸ್ಸೇ ಮುಕ್ತಿಗೆ ಕಾರಣವಾಗುತ್ತದೆ. ಅಂದರೆ ವಿಷಯಾಕಾರವಾದ ಮನಸ್ಸು ಬಂಧನಕ್ಕೆ ಕಾರಣವಾದರೆ ಬ್ರಹ್ಮಾಕಾರವಾದ, ಅಂತರ್ಮುಖವಾದ ಮನಸ್ಸು ಮೋಕ್ಷಕ್ಕೆ ಕಾರಣವಾಗುತ್ತದೆ. ಬಂಧ ಮೋಕ್ಷಗಳೆರಡೂ ಮನಃಕಲ್ಪಿತಗಳೇ ಎಂದು ಮಹನೀಯರು ಹೇಳಿದ್ದಾರೆ.

**ಮನೋಹಿ ದ್ವಿವಿಧಂ ಪ್ರೋಕ್ತಂ ಶುದ್ಧಶ್ಚಾ ಶುದ್ಧ ಮೇವ ಚ ।**
**ಅಶುದ್ಧ ಕಾಮ ಸಂಕಲ್ಪಂ ಶುದ್ಧಂ ಕಾಮ ವಿವರ್ಜಿತಮ್ ॥**

ಶುದ್ಧವಾದ ಮನಸ್ಸು ಕಾಮ ನಾಶದಿಂದ ಮೋಕ್ಷವನ್ನು ಕೊಟ್ಟರೆ ; ಅಶುದ್ಧ ಮನಸ್ಸು ಕಾಮ ವಾಸನೆಯಿಂದ ಬಂಧವನ್ನುಂಟು ಮಾಡುತ್ತದೆ. ಒಂದೇ ಒಂದು ಬೀಗದ ಕೈ

**"ಈಶಾವಾಸ್ಯ ಮಿದಂ ಸರ್ವಂ"**
ಸರ್ವ ಜಗತ್ತು ಈಶ್ವರನೇ (ಈಶಾ.ಉ.)

ಒಂದು ಕಡೆ ತಿರುಗಿದರೆ ಬೀಗ ಬೀಳುತ್ತದೆ ; ಮತ್ತೊಂದು ಕಡೆ ತಿರುಗಿಸಿದರೆ ಬೀಗ ತೆಗೆಯುತ್ತದೆ. ಹಾಗೆ ಮನಸ್ಸು ಮನುಷ್ಯನ ಬೀಗದ ಕೈ. ಅವನು ಅದರಿಂದ ಉದ್ಧಾರವಾಗಿ ಸುಖವನ್ನು ಪಡೆಯಬಹುದು ; ಅಧೋ ಮಟ್ಟಕ್ಕೆ ಹೋಗಿ ಜೀವನವೆಲ್ಲಾ ದುಃಖ ಪಡಬಹುದು. ಆದ್ದರಿಂದ ಆ ಮನಸ್ಸು ದೇವರ ಕೊಟ್ಟ ವರ. ಅದರ ಇರುವಿಕೆಯಿಂದಲೇ ಮಹಾತ್ಮರು **"ಜಂತೂನಾಂ ನರಂ ಜನ್ಮ ದುರ್ಲಭ"** ಎಂದಿದ್ದಾರೆ. ಮತ್ತಾವ ಪ್ರಾಣಿಗೂ ದುರ್ಲಭ ಎಂದು ಹೇಳಿಲ್ಲ. ಮನುಷ್ಯನಿಗೆ ಇದೊಂದೆ ಒಂದು ಪರಮಾತ್ಮನನ್ನು ಕಾಣಲು ಸಾಧನ ಅದೇ ಮನಸ್ಸು.

**ಪ್ರ.: ಬೇರೆ ಯಾವ ಪ್ರಾಣಿಗೂ ಮನಸ್ಸಿಲ್ಲವೆ? ನಾಯಿಯು ರೊಟ್ಟಿ ತೋರಿಸಿದರೆ ಓಡಿ ಬರುತ್ತದೆ. ಕೋಲು ತೋರಿಸಿದರೆ ಹೊಡೆಯುತ್ತಾರೆಂದು ಓಡುತ್ತದೆಯಲ್ಲವೆ? ಅದಕ್ಕೆ ಮನಸ್ಸಿಲ್ಲದಿದ್ದರೆ ಆ ಓಡಿ ಬರುವ ಓಡಿ ಹೋಗುವ ಕ್ರಿಯೆ ಹೇಗೆ ಬಂದವು?**

**ಉ.:** ಸರಿ-ಸರಿಯಾಗಿ ಕೇಳಿರಿ – ಕಲ್ಲು ಮಣ್ಣು ಕುರ್ಚಿ ಇತ್ಯಾದಿ ಜಡ ವಸ್ತುಗಳಲ್ಲಿ ಬರೀ ಅನ್ನಮಯವಾದ ಕೋಶ ಮಾತ್ರ ಇರುತ್ತದೆ. ಇನ್ನು ಗಿಡ, ಮರ, ಬಳ್ಳಿ ಇತ್ಯಾದಿ ಬೆಳೆಯುವ ಸಸ್ಯಾದಿಗಳಲ್ಲಿ ಬೆಳೆಯುವ ಕ್ರಿಯೆ ಇರುವುದರಿಂದ ಅಲ್ಲಿ ಅನ್ನಮಯದ ಜೊತೆಗೆ ಪ್ರಾಣಮಯವೂ ಇರುತ್ತದೆ. ಇನ್ನು ನಾಯಿ, ನರಿ, ಬೆಕ್ಕು, ಹುಲಿ, ಕರಡಿ ಇತ್ಯಾದಿ ಪ್ರಾಣಿಗಳಿಗೆ ಸ್ವಲ್ಪ ವಿವೇಕ ಇರುವುದರಿಮದ ಅನ್ನಮಯ, ಪ್ರಾಣಮಯ, ಮನೋಮಯವೂ ಇರುತ್ತದೆ. ಆದರೆ ಮನುಷ್ಯನಿಗೆ ಅನ್ನಮಯ, ಪ್ರಾಣಮಯ, ಮನೋಮಯದ ಜೊತೆಗೆ ವಿಜ್ಞಾನಮಯ ಮತ್ತು ಆನಂದಮಯ ಕೋಶಗಳಿರುತ್ತವೆ. ಈ ಕಾರಣದಿಂದ ಇವನಿಗೆ ವಿಚಾರ ಮಾಡುವ ಶಕ್ತಿಯೂ ಪರಮಾತ್ಮನನ್ನು ಪ್ರಾಪ್ತಿ ಮಾಡಿಕೊಳ್ಳುವ ಶಕ್ತಿಯೂ ಇರುತ್ತದೆ. ಆದ್ದರಿಂದ ಮನುಷ್ಯ ಜನ್ಮ ದುರ್ಲಭವಾದುದು. ಮತ್ತು ಅತಿ ಶ್ರೇಷ್ಠವಾದುದು. ಈ ಶ್ರೇಷ್ಠತ್ವವನ್ನೇ ಉಪಯೋಗಿಸಿಕೊಂಡು ಜನ್ಮಸಾರ್ಥಕ ಮಾಡಿಕೊಳ್ಳುವ ಉಪಾಯ ಮಾಡುವವನೇ ನಿಜವಾದ ಮನುಷ್ಯ. ಯಾರು ತನಗೆ ಭಗವಂತನಿಂದ ಕೊಡಲ್ಪಟ್ಟ ಪವಿತ್ರವಾದ ಬುದ್ಧಿಯಿಂದಲೇ ಮೋಕ್ಷ ಪಡೆಯುತ್ತಾನೆಯೋ ಅವನ ಜನ್ಮವೇ ಧನ್ಯ.

**ಪ್ರ.: ಈ ಮಾನವ ಜನ್ಮ ಧನ್ಯವಾಗುವುದು ಯಾವಾಗ? ಅವನು ಜನನ ಮರಣ ರೂಪ ಸಂಸಾರ ಹೇಗೆ ದಾಟುತ್ತಾನೆ?**

**ಉ.:** ಈ ಪ್ರಶ್ನೆಗೆ ಭಗವಂತನು ಈ ಶ್ಲೋಕದಲ್ಲಿಯೇ ಉತ್ತರ ಕೊಟ್ಟಿದ್ದಾನೆ. **"ಇಹೈವ ತೈರ್ಜಿತಃ ಸರ್ಗಃ"** ಎಂದಿದ್ದಾನೆ. **"ಇಹ ಏವ"** ಎಂದರೆ ಇಲ್ಲಿಯೇ, ಈಗಲೇ, ಈ ಪವಿತ್ರವಾದ ಈ ಮನುಷ್ಯ ದೇಹದಲ್ಲಿಯೇ ಶಾಂತಿ-ಸುಖವನ್ನು ಅನುಭವಿಸಬಲ್ಲನಂತೆ, ಮೋಕ್ಷವು ಉದ್ರಿ ವ್ಯಾಪಾರವಲ್ಲ, ಕ್ಯಾಷ್ ವ್ಯಾಪಾರ. ಯಾವನ ಮನಸ್ಸು

**"ದೃಶ್ಯತೇ ತ್ವಗ್ರಯಾ ಬುದ್ಧ್ಯ ಸೂಕ್ಷ್ಮಯಾ ಸೂಕ್ಷ್ಮದರ್ಶಿಭಿಃ"**
ಸೂಕ್ಷ್ಮ ಬುದ್ಧಿಯುಳ್ಳವರು ಪರಮಾತ್ಮನನ್ನು ಗ್ರಹಿಸಬಹುದು (ಕಠ.ಉ.)



ಆತ್ಮಾಕಾರವಾಗುತ್ತದೆಯೋ ಆಗಲೇ ಶಾಶ್ವತ ಸುಖ-ಮೋಕ್ಷ ದೊರಕುತ್ತದೆ. ಈ ವಿಷಯವನ್ನು ಕೇನೋಪನಿಷತ್ತು ಹೀಗೆ ಹೇಳುತ್ತದೆ.

**ಇಹ ಚೇದವೇ ದೀ ದಥ ಸತ್ಯಮಸ್ತಿ**

**ನ ಚೇದಿಹಾವೇ ದೀನ್ಮಹತೀ ವಿನಷ್ಟಿಃ ॥ 2–5 ॥**

ಇಲ್ಲಿಯೇ ಈ ಮನುಷ್ಯ ದೇಹದಲ್ಲಿಯೇ ಆ ಸತ್ಯಸ್ವರೂಪನಾದ ಆತ್ಮವನ್ನು ಅರಿತುಕೊಳ್ಳಬೇಕು. ಒಂದು ವೇಳೆ ಈ ಪವಿತ್ರವಾದ ಮನುಷ್ಯ ದೇಹದಲ್ಲಿ ಅರಿತುಕೊಳ್ಳದೆ ಹೋದರೆ ಬಹಳವಾದ ನಷ್ಟವಾಗುತ್ತದೆ ಎಂದು ಹೇಳುತ್ತದೆ. ಆದ್ದರಿಂದ ಆ ಪರಮಾತ್ಮನನ್ನು ಇಲ್ಲಿಯೇ ಅರಿಯಲೇ ಬೇಕು.

**ಪ್ರ. : ಆ ಪರಮಾತ್ಮನು ಎಲ್ಲಿದ್ದಾನೆ? ಹೇಗಿದ್ದಾನೆ? ಅವನನ್ನು ಹೇಗೆ ಅರಿಯಬೇಕು?**

**ಉ.:** ಆ ಆತ್ಮಸ್ವರೂಪವಾದ ಬ್ರಹ್ಮಕ್ಕೆ ಈ ಶ್ಲೋಕದಲ್ಲಿ ಎರಡು ಲಕ್ಷಣವನ್ನು ಹೇಳಿದ್ದಾನೆ. ಒಂದು ಆ ಬ್ರಹ್ಮವು **"ನಿರ್ದೋಷವಾದುದು ಮತ್ತು ಎಲ್ಲೆಲ್ಲಿಯೂ ಸಮವಾದುದು."** ಹೀಗೆ ಈ ಎರಡು ಲಕ್ಷಣ ಎಲ್ಲಿ ಕಂಡು ಬರುತ್ತದೆಯೋ ಅದೇ ಆತ್ಮ ; ಅದೇ ಬ್ರಹ್ಮ; ಅದೇ ತಾನು. ಪ್ರಪಂಚದಲ್ಲಿ ಎಲ್ಲೆಲ್ಲಿಯೂ ವಿಷಮತೆ ಕಾಣುತ್ತದೆ. ಈ ಬ್ರಹ್ಮವು ನಿರ್ದೋಷವಾದುದು. ಅದರಲ್ಲಿ ಯಾವ ದೋಷವೂ ಇಲ್ಲ ಮತ್ತು ಸಮವಾದುದು. ಆದುದರಿಂದ **"ಬ್ರಹ್ಮವಿದ್ ಬ್ರಹ್ಮೈವ ಭವತಿ"** ಬ್ರಹ್ಮವನ್ನು ತಿಳಿದವನು ಬ್ರಹ್ಮವೇ ಆಗುತ್ತಾನೆ ಎಂದು ಮುಂಡಕ ಶ್ರುತಿ ಹೇಳುತ್ತದೆ. ಈ ವಿಷಯವನ್ನು ಈ ಶ್ಲೋಕದಲ್ಲಿ **"ಬ್ರಹ್ಮಣಿ ಸ್ಥಿತಾಃ"** ಎಂದರೆ ಬ್ರಹ್ಮದಲ್ಲಿ ಸ್ಥಿತಿವುಳ್ಳವರು ಎಂದು ಹೇಳಿದೆ. ಅಂದರೆ ಸಜಾತೀಯ ವಸ್ತುವಿನಲ್ಲಿ ಸಜಾತೀಯ ವಸ್ತು ಕೂಡುತ್ತದೆಯೇ ವಿನಃ ವಿಜಾತೀಯ ವಸ್ತುವಿನಲ್ಲಿ ಕೂಡುವುದಿಲ್ಲ. ನೀರಿನಲ್ಲಿ ನೀರು ಕೂಡುವಂತೆ, ಎಣ್ಣೆಯಲ್ಲಿ ಎಣ್ಣೆ ಕೂಡುವಂತೆ ಆ ಬ್ರಹ್ಮದಲ್ಲಿ ಬ್ರಹ್ಮವೇ ಕೂಡುತ್ತದೆ.

**ಪ್ರ. : ಬ್ರಹ್ಮದಲ್ಲಿ ಬ್ರಹ್ಮವೇ ಕೂಡುತ್ತದೆ ಎನ್ನುತ್ತೀರಲ್ಲ ಜೀವನು ಬ್ರಹ್ಮನೆ? ಒಂದು ವೇಳೆ ಜೀವನು ಬ್ರಹ್ಮನಾದರೆ-ಅನೇಕ ಜೀವರು ಇರುವುದರಿಂದ ಬ್ರಹ್ಮರೂ ಅನೇಕ ಆಗಲಿಲ್ಲವೆ?**

**ಉ.:** ಈಗ ಸ್ವಲ್ಪ ವಿಚಾರ ಮಾಡಿ – ನಿಮಗೆ ಸ್ವಪ್ನ ಬೀಳುತ್ತದೆ ಅಲ್ಲವೆ? ಬೀಳುತ್ತದೆ. ಆ ಸ್ವಪ್ನ ಪದಾರ್ಥಗಳನ್ನು ಅಲ್ಲಿಯ ಸುಖ-ದುಃಖವನ್ನು ಜಾಗೃತಿಗೆ ಬಂದಾಗ ಹೇಳುತ್ತೀರಿ ಅಲ್ಲವೆ? ಹೌದು, ಆ ಸ್ವಪ್ನದ ಸರ್ವ ವಿಷಯಗಳನ್ನು ಅಲ್ಲಿಯ ಸುಖ ದುಃಖವನ್ನು ನೀವು ಜಾಗೃತಿನಲ್ಲಿ ಹೇಳುವುದರಿಂದ ನೀವು ಸ್ವಪ್ನದಲ್ಲಿ ಇದ್ದು – ಎಲ್ಲಾ ಘಟನೆ ನೋಡಿದಿರಿ. ಅಲ್ಲಿಯ ಸುಖವನ್ನು ದುಃಖವನ್ನು ಅನುಭವಿಸುವ ತೈಜಸ ಜೀವನನ್ನು ವಿಕಾರವಿಲ್ಲದೆ ನೋಡಿದ್ದರಿಂದಲೇ ಬೆಳಿಗ್ಗೆ ಎದ್ದು ಹೇಳುತ್ತೀರಿ. ನೋಡದೆ ಇದ್ದರೆ ಹೇಳಲು ಹೇಗೆ ಬರುತ್ತದೆ? ಹಾಗಾದರೆ ಅಲ್ಲಿ ಒಂದು ಅರಿಯುವ ಅರಿವು ಇದೆ ಎಂದಾಯಿತು. ಇನ್ನು ಜಾಗೃತಿನಲ್ಲಿ ಸುಖದುಃಖ ರಾಗ ದ್ವೇಷ ಎಲ್ಲವನ್ನು ಅನುಭವಿಸುವವನನ್ನು ನೋಡುತ್ತೀರಿ.

**"ಇಹ ಚೇದ ವೇದೀ ದಥ ಸತ್ಯಮಸ್ತಿ । ನ ಚೇದಿ ಹಾವೇದಿನ್ಮಹತೀ ವಿನಷ್ಟಿಃ"**
ಮಾನವನು ಇದೇ ಜನ್ಮದಲ್ಲಿಯೇ ಮುಕ್ತಿ ಪಡೆಯಬೇಕು, ಇಲ್ಲದೇ ಹೋದರೆ ಮಹತ್ತರ-ವಾದ ನಷ್ಟವು ಸಂಭವಿಸುತ್ತದೆ ಎಂದು ಉಪನಿಷತ್ ನಮ್ಮನ್ನು ಎಚ್ಚರಿಸುತ್ತದೆ (ಕೇನ.ಉ.)

ಅನುಭವಿಸುವವರು ನೀವಲ್ಲ. ಅನುಭವಿಸುವವನು ವಿಶ್ವ ಎಂಬ ಜೀವ. ಇನ್ನು ನಿದ್ದೆಯಲ್ಲಿ ಜಾಗೃತ್ತು ಪ್ರಪಂಚ ಇಲ್ಲ. ಸ್ವಪ್ನ ಪ್ರಪಂಚ ಇಲ್ಲ, ಯಾವುದೂ ಇಲ್ಲ. ಸುಖ ಒಂದು ಮಾತ್ರ ಇರುತ್ತದೆ. ಅದನ್ನು ಸಹಿತ ಅದಕ್ಕಿಂತ ಬೇರೆ ಆಗಿ ನೋಡಿ ಬೆಳಿಗ್ಗೆ ಎದ್ದ ಮೇಲೆ ನಾನು ಸುಖವಾಗಿ ಮಲಗಿದ್ದೆ ಏನೂ ತಿಳಿಯಲಿಲ್ಲ ಎನ್ನುತ್ತೀರಿ ಅಲ್ಲವೆ! ಹಾಗಾದರೆ ಅಲ್ಲಿಯೂ ಒಂದು ಅರಿವಿದೆ. ಆ ಮೂರಾವಸ್ಥೆಯಲ್ಲಿರುವ ಅರಿವು ಬೇರೆ ಬೇರೆ ಅಲ್ಲ ; ಅದು ಒಂದೇ ಒಂದು ; ಅದೇ ನೀವು.

ಮೂರಾವಸ್ಥೆಯಲ್ಲಿಯೂ ನೀವು ಇರುವುದರಿಂದ ನೀವು ಸದ್‌ರೂಪರು, ಮೂರಾವಸ್ಥೆಯನ್ನು ತಿಳಿಯುವುದರಿಂದ ಚಿದ್ ರೂಪರು ಮೂರಾವಸ್ಥೆಯಲ್ಲಿ ನಿರ್ವಿಕಾರವಾಗಿರುವುದರಿಂದ ಆನಂದ ರೂಪರು ; ಹೀಗೆ ನೀವು ಸತ್ತು –ಚಿತ್ತು ಆನಂದ ರೂಪರು ಹೀಗೆ ಬ್ರಹ್ಮಕ್ಕೆ ಉಪನಿಷತ್ತಿನಲ್ಲಿ **"ಸತ್ಯಂ ಜ್ಞಾನಮತಂ ಬ್ರಹ್ಮ"** ಎಂದು ತೈತ್ತಿರೀಯ ಉಪನಿಷತ್ತು ಹೇಳುತ್ತದೆ. ಆದ್ದರಿಂದ ಜೀವನೇ ಪರಬ್ರಹ್ಮನು. ಎರಡರಲ್ಲಿಯೂ ಸಮಾನ ಲಕ್ಷಣಗಳಿವೆ. ಆದ್ದರಿಂದ ನೀರಿನಲ್ಲಿ ನೀರು ಕೂಡುವಂತೆ – ಹಾಲಿನಲ್ಲಿ ಹಾಲು ಕೂಡುವಂತೆ, ಎಣ್ಣೆಯಲ್ಲಿ ಎಣ್ಣೆ ಕೂಡುವಂತೆ ಬ್ರಹ್ಮದಲ್ಲಿ ಜೀವನು ಏಕವಾಗಿರಬೇಕಾದರೆ ಬ್ರಹ್ಮದ ಲಕ್ಷಣವುಳ್ಳ ಪದಾರ್ಥವೆ ಆಗಿರಬೇಕಲ್ಲವೆ? ಮಾಯೆಗೆ ಅಧಿಷ್ಠಾನವಾದ ಬ್ರಹ್ಮಕ್ಕೂ, ಅವಿದ್ಯೆಗೆ ಅಧಿಷ್ಠಾನವಾದ ಪ್ರತ್ಯಗಾತ್ಮನಿಗೂ ಒಂದೇ ಲಕ್ಷಣಗಳಿರುವುದರಿಂದ ಪ್ರತ್ಯಗಾತ್ಮನೇ ಪರಬ್ರಹ್ಮ ; ಆದ್ದರಿಂದ ಸರ್ವಜೀವರೂ ನಾನು ಜೀವನು ಎಂಬ ಭಾವವನ್ನು ಬಿಟ್ಟು ನಾನು ಬ್ರಹ್ಮ ಎಂಬ ಭಾವವನ್ನು ಪಡೆದುಕೊಂಡಾಗ ಈ ದುಃಖ ಸಂಸಾರದ ಸಮುದ್ರದಿಂದ ಪಾರಾಗುವುದು ಏನಾಶ್ಚರ್ಯ! ಮೋಕ್ಷವೆಂಬುದು ಆಕಾಶದಲ್ಲಿಲ್ಲ – ವೈಕುಂಠದಲ್ಲಿಲ್ಲ. ಶಿವ ಲೋಕದಲ್ಲಿಲ್ಲ – ಪಾತಾಳದಲ್ಲಿಲ್ಲ. ಚಿತ್ತವನ್ನು ಪ್ರಯತ್ನ ಪೂರ್ವಕವಾಗಿ ನಿರ್ಮಲಗೊಳಿಸಿದರೆ – ನಿಶ್ಚಲ ಸ್ಥಿತಿಯಲ್ಲಿರಿಸಿದರೆ ಅಂತಹವರಿಗೆ ಈ ಲೋಕದಲ್ಲಿಯೇ ಮೋಕ್ಷ. ಅದೇ ಬ್ರಹ್ಮಾನಂದ ; ಅದೇ ಶಾಶ್ವತ ಸುಖ. ಅದೇ ಮೋಕ್ಷ. ಅಂತವರೇ ಸಂಸಾರವನ್ನು ಗೆದ್ದುಕೊಂಡವರು, ಅವರೆ ಬ್ರಹ್ಮ ಸ್ವರೂಪರು. ಯಾವ ಕ್ಷಣದಲ್ಲಿ ಮನಸ್ಸು ಬ್ರಹ್ಮಾಕಾರವಾಗುತ್ತದೆಯೋ ಅದೇ ಮೋಕ್ಷ. ಅದು ಅನೇಕವಲ್ಲ ಏಕ.

ಆದ್ದರಿಂದ ಪ್ರತಿ ಪ್ರಾಣಿಯನ್ನು ಪ್ರತಿ ವಸ್ತುವನ್ನು ದೇಹ ದೃಷ್ಟಿಯಿಂದ ಜೀವ ದೃಷ್ಟಿಯಿಂದ ನೋಡಬಾರದು ಆತ್ಮ ದೃಷ್ಟಿಯಿಂದ ನೋಡಬೇಕು. ಇದೇ ಚರಮ ಸ್ಥಿತಿ – ಈ ಸ್ಥಿತಿಯನ್ನು ತಿಳಿದು ಸರ್ವರೂ ಧನ್ಯರಾಗಬೇಕು.

ನೀರಿನಲ್ಲಿ ಸದಾ ದೋಣಿಯಲ್ಲಿ ಓಡಾಡುವವನಿಗೆ ಹೇಗೆ ಈಜು ಮುಖ್ಯವೋ ಹಾಗೇ ಸಂಸಾರದಲ್ಲಿರುವವನಿಗೆ ಈ ಬ್ರಹ್ಮ ಪ್ರಾಪ್ತಿ ಬಹಳ ಮುಖ್ಯ ಮತ್ತು ಈ ಶ್ಲೋಕವು

---

**"ನಾ ಹಂ ಕರ್ತಾ ಹರಿಃ ಕರ್ತಾ ತತ್ಪೂಜಾಕರ್ಮ ಚಾಖಿಲಮ್"**

ಯಾವ ಕೆಲಸಕ್ಕೂ ನಾನು ಕರ್ತನಲ್ಲ, ಭಗವಂತನೇ ಕರ್ತ

ನಾನು ಮಾಡುವುದೆಲ್ಲಾ ಅವನ ಪೂಜೆ. (ಮಧ್ವಾಚಾರ್ಯ)



ಮತ್ತೊಂದು ವಿಶೇಷ ಹೇಳುವುದೇನೆಂದರೆ – ಪ್ರತಿಯೊಬ್ಬನಿಗೂ ಮೋಕ್ಷ ಪಡೆಯಲು ಅರ್ಹತೆ ಇದೆ, ಧೈರ್ಯ ಇದೆ ಎಂದು ಹೇಳುತ್ತದೆ.

ಮತ್ತು ಸಂಸಾರ ಇರುವುದೆಲ್ಲಿ? ಮನಸ್ಸಿನಲ್ಲಿ ; ಮೋಕ್ಷ ಇರುವುದೆಲ್ಲಿ? ಅದೂ ಸಹ ಮನಸ್ಸಿನಲ್ಲಿಯೆ. **ವಿಷಯಾಕಾರವಾದ ಮನಸ್ಸೇ ಸಂಸಾರ. ಬ್ರಹ್ಮಕಾರವಾದ ಮನಸ್ಸೇ ಮೋಕ್ಷ.** ಆದ್ದರಿಂದ ಇಲ್ಲಿಯೇ ಈ ಮಾನವ ಜೀವನದಲ್ಲಿಯೇ ಜನನ ಮರಣ ರೂಪವಾದ ಸಂಸಾರವನ್ನು ದಾಟಬೇಕು. ಅಂದರೆ ನನ್ನ ಸ್ವರೂಪ ಭೂತವಾದ ಬ್ರಹ್ಮವು ನಿರ್ದೋಷವಾದುದು, ಸಮವಾದುದು. ಅಂತಹ ಬ್ರಹ್ಮವೇತಾವೆಂದು ತಿಳಿದುಕೊಂಡ ಮಹನೀಯರು ಬ್ರಹ್ಮ ಸ್ವರೂಪರೇ ಆಗುತ್ತಾರೆ.

**ಇದಕ್ಕೆ ಒಂದು ಉದಾಹರಣೆ ನೋಡೋಣ :** ಒಬ್ಬ ರಾಜನಿಗೆ 3ನೇ ಮಗ ಮೂಲಾ ನಕ್ಷತ್ರದಲ್ಲಿ ಹುಟ್ಟಿದ. ತಂದೆಗೆ ಮರಣವೆಂದು ಪಂಚಾಂಗ ಕರ್ತರು ಹೇಳಿದರು. ಆ ಮಗುವನ್ನು ದೂರ ಸಾಗಿಸಿದರು. ಆ ಮಗು ಪೂರ್ವ ಪುಣ್ಯದಿಂದ ಒಬ್ಬ ಅಗಸನಿಗೆ ಸಿಕ್ಕಿತು. ಅವನು ಸಾಕಿದ 12 ವರ್ಷವಾಯಿತು. ಒಂದು ಸಾರಿ ಒಬ್ಬ ಹಸ್ತ ಸಾಮುದ್ರಿಕವಂತ ಬರುತ್ತಿದ್ದಾನೆ. ಹುಡುಗನು ಕತ್ತೆ ಕಾಯುತ್ತಿದ್ದಾನೆ. ಅವನು ಆ ಮಗುವಿನ ಮುಖ ನೋಡಿ ಇದು ರಾಜನ ಮಗನಾಗಿರಬೇಕಾಗಿತ್ತಲ್ಲ! ಕತ್ತೆ ಕಾಯುತ್ತಿದ್ದಾನಲ್ಲ ಎಂದು ಆ ಮಗುವನ್ನು ಕೇಳಿದ. ನಾನು **"ಅಗಸರ ರಾಮಯ್ಯನ ಮಗ"** ಎಂದಿತು. ಸೀದ ಅಗಸರ ಮನೆಗೆ ಬಂದ ನನ್ನ ಹಸ್ತಸಾಮುದ್ರಿಕೆ ಪರೀಕ್ಷಿಸಬೇಕೆಂದು ಅವನಿಗೆ ಕುತೂಹಲ. ನನ್ನ ಹತ್ತಿರ ಸುಳ್ಳು ಹೇಳ ಬೇಡ, ಈ ಮಗು ಯಾವುದು? ಸ್ವಾಮಿ ನನಗೆ ಮಕ್ಕಳಿಲ್ಲ ; ಒಂದು ಸಾರಿ ಬಟ್ಟೆ ತೊಳೆಯುತ್ತಿರುವಾಗ ಆ ಮರದ ಕೆಳಗೆ ಅಳುತ್ತಿತ್ತು. ಮನೆಗೆ ತೆಗೆದುಕೊಂಡು ಬಂದು ಸಾಕಿದೆ. ಆ ಸಿಕ್ಕ ದಿವಸ ಯಾವುದು? – ಸ್ವಾಮಿ ಯುಗಾದಿ ಅದ 9ನೇ ದಿವಸ ಎಂದ. ನೇರವಾಗಿ ರಾಜನ ಮನೆಗೆ ಹೋದ. ಸುಳ್ಳು ಹೇಳಬೇಡ ರಾಜ, ನಿನಗೆ ಎಷ್ಟು ಜನ ಮಕ್ಕಳು? 3 ಜನರು. ಇಬ್ಬರಿದ್ದಾರಲ್ಲ? ಒಬ್ಬ ಮಗ ಮೂಲಾ ನಕ್ಷತ್ರದಲ್ಲಿ ಹುಟ್ಟಿದ. ಅವನನ್ನು ದೂರ ಹಾಕಿ ಬರಲು ಹೇಳಿದೆ ಎಂದ ರಾಜ ; ಯಾವ ದಿವಸ. ರಾಮನವಮಿ ದಿವಸ ; ಎರಡೂ ಒಂದೆ ದಿವಸ ಸರಿ ನೀನು ರಾಜನ ಮಗನೇ ಎಂದು ಆ ಹುಡುಗನಿಗೆ ಹೇಳಿದ. ರಾಜನಿಗೆ ಹೇ ರಾಜ ! ಇವನು ನೀನು ಮೂಲ ನಕ್ಷತ್ರದಲ್ಲಿ ಹುಟ್ಟಿದವನೆಂದೂ ತಂದೆಗೆ ಮರಣ ಎಂದು ಅರಣ್ಯದಲ್ಲಿ ಎಸೆದು ಬಂದಿದ್ದರಲ್ಲಾ! ಆ ಮಗುವೇ ಇದು. ಈಗ ಇವನಿಗೆ 12 ವರ್ಷ ಆಗಿದೆ. ಆ ಮೂಲಾ ನಕ್ಷತ್ರ ದೋಷ ನಿವಾರಣೆ ಆಗಿದೆ. ಈ ಮಗುವನ್ನು ಈಗ ನೀನು ಸ್ವೀಕರಿಸು ಎಂದು ಹೇಳಿದ. ಆಗ ಮಗು ರಾಜನ ಮಗನಾಯಿತು. ಅಂದರೆ ತಪ್ಪು ತಿಳಿದು ಅಗಸರ ಮಗನಾಗಿದ್ದು ಈಗ ಸರಿಯಾಗಿ ತಿಳಿದು ರಾಜನ ಮಗನಾಯಿತು. ಇದು ಭಾವ ಮಾತ್ರ ವ್ಯತ್ಯಾಸ. ಆ ಮಗು ಇದ್ದಂತೆ ಇದೆ. ಏನೂ ವ್ಯತ್ಯಾಸವಾಗಿಲ್ಲ. ತಿಳುವಳಿಕೆ ಮಾತ್ರ ವ್ಯತ್ಯಾಸ. ಅಗಸರ ಮಗನೆಂಬ ತಪ್ಪು ತಿಳುವಳಿಕೆ

---

**"ಯನ್ಮನಸಾನುಮನತೆ ಯೇ ನಾರ್ಹು ಮನೋಮತಮ್"**

ಯಾವುದು ಮನಸ್ಸಿನಿಂದ ಮನನ ಮಾಡಲು ಆಗುವುದಿಲ್ಲವೋ, ಯಾವುದು ಮನಸ್ಸಿಗೆ

ಮನನ ಮಾಡುವ ಶಕ್ತಿ ಕೊಟ್ಟಿರುವುದೋ ಅದೆ ಪರಮಾತ್ಮ (ಕೇನ.ಉ.)

ಹೋಗಿ ರಾಜನ ಮಗನೆಂಬ ಸರಿಯಾದ ತಿಳುವಳಿಕೆ ಬಂತು. ಹೀಗೆ ನಾವು ಸಹಿತ ಬ್ರಹ್ಮವನ್ನು ತಿಳಿದು ಬ್ರಹ್ಮವಾದರೆ ಮಾತ್ರ ಜೀವನ ಸಾರ್ಥಕ. ಅಂತಹ ಅವಕಾಶ ಸರ್ವರಿಗೂ ಒದಗಲಿ ಎನ್ನುವ ಭಾವವನ್ನು ಈ ಗೀತಾ ಶ್ಲೋಕವು ನಮಗೆ ಉಪದೇಶ ಮಾಡುತ್ತದೆ.

ಓಂ ತತ್ಸತ್

# ಭಕ್ತನ ಲಕ್ಷಣಗಳು

**– ಡಾ|| ಅನಂದಕುಮಾರ್, ಬೆಂಗಳೂರು**

ಭಕ್ತನ ಲಕ್ಷಣಗಳು ಭಗವದ್ಗೀತೆಯಲ್ಲಿ ಹನ್ನೆರಡನೆಯ ಅಧ್ಯಾಯ ಭಕ್ತಿಯೋಗದಲ್ಲಿ ಭಗವಂತನು ಸವಿಸ್ತಾರವಾಗಿ ವರ್ಣನೆ ಮಾಡಿದ್ದಾನೆ. ಭಕ್ತಿ ಶಾಸ್ತ್ರದಲ್ಲಿ ಹನ್ನೆರಡು ಎಂಬ ಸಂಖ್ಯೆಯು ಬಹಳ ಪೂರ್ಣವಾದುದು. ಭಾಗವತವು ದ್ವಾದಶ ಸ್ಕಂದವುಳ್ಳದ್ದಾಗಿದೆ. ನಾರಾಯಣನ ಆದಿತ್ಯ ಸ್ವರೂಪವು ದ್ವಾದಶಾತ್ಮವಾಗಿದೆ. ಗೀತೆಯ ವಿಭೂತಿ ವರ್ಣನೆಯಲ್ಲಿ **"ಆದಿತ್ಯಾನಾಮಹಂ ವಿಷ್ಣು"** ದ್ವಾದಶ ಆದಿತ್ಯದಲ್ಲಿ ವಿಷ್ಣುವೇ ನಾನು ಎನ್ನುತ್ತಾನೆ ಭಗವಂತ. ಅಂದರೆ ದ್ವಾದಶ ಆದಿತ್ಯರಲ್ಲಿ ಹನ್ನೆರಡನೇ ಆದಿತ್ಯನೇ ವಾಮನ. ಭಗವಂತನು ಮೊದಲೇ ವಾಮನ ರೂಪದಲ್ಲಿ ಆದಿತಿಗೆ ಪ್ರಕಟವಾದನು. ದೈತ್ಯರಾಜ ಬಲಿ ಚಕ್ರವರ್ತಿಯಿಂದ ಮೂರು ಪಾದ ಭೂಮಿ ಪಡೆಯುವುದಕ್ಕಿಂತಲೂ ಮೊದಲೇ ಅವನು ತ್ರಿವಿಕ್ರಮನಾಗಿದ್ದನು ಮತ್ತು ಬಲಿಯನ್ನು ರಸಾತಳಕ್ಕೆ ಕಳಿಸಿ ನಂತರ ತ್ರಿವಿಕ್ರಮ ರೂಪ ತ್ಯಾಗ ಮಾಡಿದನು.

ಭಗವಂತನು ಗೀತೆಯಲ್ಲಿ ಭಗವತ್ ಪ್ರಾಪ್ತಿಯನ್ನು ಹೊಂದುವುದಕ್ಕೆ ಮೂರು ಮಾರ್ಗೋಪಾಯಗಳನ್ನು ಹೇಳಿದ್ದಾನೆ. ಅವುಗಳು ಕರ್ಮಯೋಗ, ಭಕ್ತಿಯೋಗ ಮತ್ತು ಜ್ಞಾನಯೋಗವೆಂದೂ ಇವುಗಳ ಮೂಲಕ ಮಾನವನು ಪುರುಷ ಪ್ರಯತ್ನದಿಂದ ಮುಕ್ತಿ ಹೊಂದಬೇಕು. ಹಾಗಾದರೆ ಭಗವತ್ ಪ್ರಾಪ್ತಿ ಮಾಡಿಕೊಳ್ಳುವುದಕ್ಕೆ ಭಗವಂತನು ಹೇಳಿದ ಯಾವ ಯೋಗದಿಂದ ಸುಲಭವಾಗಿ ಮುಕ್ತಿ ಹೊಂದಬಹುದು ಎಂಬ ಜಿಜ್ಞಾಸೆಗೆ ಒಂದು ಉದಾಹರಣೆ ಮೂಲಕ ಸುಲಭವಾಗಿ ತಿಳಿದುಕೊಳ್ಳಬಹುದು.

ಬೆಂಗಳೂರಿನಿಂದ ಮುಂಬೈಗೆ ನಡೆದು ಹೋಗುವುದಾದರೆ ಹತ್ತು ದಿನ ಹಿಡಿಯಬಹುದು. ಎತ್ತಿನ ಗಾಡಿಯಲ್ಲಿ ಹೋದರೆ ಒಂದು ವಾರ ಬೇಕಾಗಬಹುದು. ಬಸ್ಸಿನಲ್ಲಿ ಹೋದರೆ ಎರಡು ದಿನದಲ್ಲಿ ಸೇರಬಹುದು. ರೈಲಿನಲ್ಲಿ ಹೋದರೆ ಒಂದೇ ದಿನದಲ್ಲಿ ಗುರಿ ಮುಟ್ಟಬಹುದು. ಅದೇ ವಿಮಾನದಲ್ಲಿ ಹೊರಟರೆ ಒಂದೇ ಗಂಟೆಯಲ್ಲಿ ಸೇರಿಕೊಳ್ಳಬಹುದು. ದೂರವೆಷ್ಟಾದರೂ ಇರಲಿ, ಅವಲಂಬಿಸಿರುವ ವಾಹನದ ವೇಗವನ್ನನುಸರಿಸಿ ಪ್ರಯಾಣದ ಕಾಲದ ಪರಿಮಿತಿಯು ಇರುತ್ತದೆ. ಒಳ್ಳೆಯ ವಾಹನ ಉಪಯೋಗಿಸಿ ಶೀಘ್ರವಾಗಿ ಗುರಿಮುಟ್ಟಬಹುದು. ಅದೇ ನಡೆದುಕೊಂಡು

---

**"ನಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ"**

ಜ್ಞಾನಕ್ಕೆ ಸರಿಸಮಾನವಾದ ಯಾವ ಪವಿತ್ರ ವಸ್ತುಗಳು ಇಲ್ಲವೇ ಇಲ್ಲ.

(ಗೀತೆ 4-38)



ಹೋಗುವುವರಿಗೆ ಹಾಗೂ ಎತ್ತಿನಗಾಡಿಯಲ್ಲಿ ಹೋಗುವುವರಿಗೆ ಹಲವು ಅಡ್ಡಿ ಆತಂಕಗಳು ಎದುರಾಗಬಹುದು. ಅದೇ ವಿಮಾನದಲ್ಲಿಯಾದರೋ ಅತೀ ಶೀಘ್ರವಾಗಿ ಸೇರಬಹುದು. ಆದರೆ ಒಂದು ವೇಳೆ ಪ್ರಾಣಾಂತಕವಾದೀತು! ಎಚ್ಚರ. ಹಾಗಾದರೆ ರೈಲು ಪ್ರಯಾಣವಾದರೆ ಒಂದು ವಿಧದಲ್ಲಿ ನಿರಪಾಯವಾದದ್ದು ಸುಲಭವಾಗಿ ಆರಾಮದಾಯಕವಾಗಿ ಸ್ವಲ್ಪಮಟ್ಟಿಗೆ ಶೀಘ್ರವಾಗಿಯೂ ಹೋಗಬಹುದು.

ಕರ್ಮಯೋಗವು ಎತ್ತಿನಬಂಡಿಯಂತೆಯೂ, ಜ್ಞಾನಮಾರ್ಗವು ವಿಮಾನ-ದಂತೆಯೂ, ಭಕ್ತಿ ಮಾರ್ಗವು ರೈಲು ಪ್ರಯಾಣದಂತೆ, ಸುಖವಾಗಿಯೂ, ನಿರಪಾಯವಾಗಿಯೂ ಮಾನವನು ಭಗವತ್ ಪ್ರಾಪ್ತಿ ಮಾಡಿಕೊಳ್ಳಬಹುದು. ಆ ಭಕ್ತಿ ಮಾರ್ಗವನ್ನೇ ಮುಖ್ಯವಾಗಿ ಗೀತೆಯ ಹನ್ನೆರಡನೆ ಅಧ್ಯಾಯದಲ್ಲಿ ಸವಿಸ್ತಾರವಾಗಿ ಪ್ರಾಪ್ತಿ ಮಾಡಿಕೊಳ್ಳುವ ಉಪಾಯವನ್ನು ಹೇಳಿದ್ದಾನೆ. ಗಂಗಾನದಿಯು ಗಂಗೋತ್ರಿಯಲ್ಲಿ ಹುಟ್ಟಿ ಎರಡು ಸಾವಿರ ಮೈಲಿ ಪ್ರವಹಿಸಿ ಗಂಗಾ ಸಾಗರದಲ್ಲಿ ಬಂಗಾಳ ಕೊಲ್ಲಿ ಸಮುದ್ರವನ್ನು ಸೇರಿದರೂ, ಅದು ಹರಿಯುವ ಎಲ್ಲಾ ಕಡೆಯೂ ಅತ್ಯಂತ ಪವಿತ್ರ ಕ್ಷೇತ್ರವಾಗಿವೆ. ಆದರೂ ಸಹ ಅದರ ಪವಿತ್ರತೆಯು ಕೆಲವು ಕ್ಷೇತ್ರಗಳಲ್ಲಿ ಹರಿದ್ವಾರ, ಕಾಶಿ, ಪ್ರಯಾಗ ಮೊದಲಾದ ಪ್ರದೇಶಗಳಲ್ಲಿ ಅತ್ಯಂತ ಪವಿತ್ರ ತೀರ್ಥ ಕ್ಷೇತ್ರವಾಗಿದೆ. ಈ ತೀರ್ಥಕ್ಷೇತ್ರದಲ್ಲಿ ಗಂಗೆಯಲ್ಲಿ ಮಿಂದವರು ಮುಕ್ತಿಯನ್ನು ಪಡೆಯುತ್ತಾರೆ ಎಂಬ ನಂಬಿಕೆ ಇದ್ದಂತೆ, ಭಗವದ್ಗೀತೆಯ ಎಲ್ಲಾ ಅಧ್ಯಾಯಗಳು ಗಂಗಾ ನದಿಯಂತೆ ಪವಿತ್ರವಾದುದೇ ಆದರೂ, ಕೆಲವು ಗಂಗಾ ನದಿಯ ತೀರ್ಥಕ್ಷೇತ್ರಗಳಂತೆ, ಭಕ್ತಿಯೋಗವೂ ಸಹ ಇದೇ ಗುಂಪಿಗೆ ಸೇರಿರುವುದು. ಶ್ರೀಕೃಷ್ಣ ಭಗವಂತನೇ ಭಕ್ತಿಯೋಗದ ಅಂತ್ಯದಲ್ಲಿ **"ಯೇತು ಧರ್ಮ್ಯಾ ಮೃತಮಿದಮ್"** ಈ ಭಕ್ತಿಯೋಗವು ಅಮೃತ ಸ್ವರೂಪವಾದ ಧರ್ಮ ಎಂದು ಅಪ್ಪಣೆ ಕೊಟ್ಟಿದ್ದಾನೆ.

ಇಂತಹ ಪವಿತ್ರವಾದ ಭಕ್ತಿಯೋಗದಲ್ಲಿ ಕೊನೆಯ 8 ಶ್ಲೋಕಗಳು ಬಹು ಮಹತ್ವ ಪೂರ್ಣವಾದ ಶ್ಲೋಕಗಳಾಗಿವೆ. ಏಕೆಂದರೆ ಈ 8 ಶ್ಲೋಕಗಳಲ್ಲಿ ಶ್ರೀಕೃಷ್ಣ ಭಗವಂತನು ಜಗತ್ಪ್ರಸಿದ್ಧಿಯಾದ ಭಕ್ತನ 33 ಲಕ್ಷಣಗಳನ್ನು ವರ್ಣಿಸಿದ್ದಾನೆ. ಈ 33 ಲಕ್ಷಣಗಳು ಭಕ್ತನಲ್ಲಿರುವ ಸ್ವಾಭಾವಿಕ ಲಕ್ಷಣಗಳು, ಸಾಧಕನಿಗೂ ಸಹ ಅಭ್ಯಾಸದಿಂದ ಇವು ಉಂಟಾಗುತ್ತವೆ.

ಸಾಧಕನು ಈ 33 ಲಕ್ಷಣಗಳನ್ನು ಸಾಧನೆಯಲ್ಲಿ ತರಲು ಕಷ್ಟವಾದಲ್ಲಿ, ಅದಕ್ಕೂ ಭಗವಂತನೂ ಸುಲಭ ಉಪಾಯ ಹೇಳಿದ್ದಾನೆ. ಅದೇನೆಂದರೆ **"ಮತ್ಕರ್ಮಕೃತ್"** ನನ್ನ ಕರ್ಮ ಅಂದರೆ ಮಾಡುವ ಸರ್ವ ಕೆಲಸಗಳನ್ನು ಭಗವಂತನಿಗೆ ಅರ್ಪಿಸಲು ಸಾಧ್ಯವಾಗದೆ ಹೋದಲ್ಲಿ, ಅದಕ್ಕೂ ಭಗವಂತನು ಉಪಾಯ ಹೇಳಿದ್ದಾನೆ. **"ಸರ್ವಕರ್ಮ ಫಲ ತ್ಯಾಗ"** ನಾವು ಮಾಡುವ ಎಲ್ಲಾ ಕರ್ಮಗಳ ಫಲವನ್ನಾದರೂ ಭಗವಂತನಿಗೆ ಅರ್ಪಿಸಬೇಕು. ಹೀಗೆ ಹೇಗಾದರೂ ಮಾಡಿ ಭಕ್ತರಾಗಲಿ ಎಂಬುದೇ ಭಗವಂತನ ಆಶಯ.

---

**"ದೃಷ್ಟಿಂ ಜ್ಞಾನಮಯೀಂ ಕೃತಪಶ್ಯೇದ್ ಬ್ರಹ್ಮಮಯಂ ಜಗತ್"**

ನಮ್ಮ ದೃಷ್ಟಿ ಜ್ಞಾನಮಯವಾದರೆ ಜಗತ್ತೆಲ್ಲಾ ಬ್ರಹ್ಮಮಯವಾಗುತ್ತದೆ

ಈಗ ಭಕ್ತನ ಲಕ್ಷಣಗಳ ಬಗ್ಗೆ ತಿಳಿಯೋಣ. ಹನ್ನೆರಡನೇ ಅಧ್ಯಾಯದ 13ನೇ ಶ್ಲೋಕದಿಂದ 20ನೇ ಶ್ಲೋಕದವರೆಗೆ ಈ 8 ಶ್ಲೋಕಗಳಲ್ಲಿ ಭಕ್ತನು ಅಂದರೆ ಯಾರು? ಅವನ ಸ್ವಭಾವವೇನು? ಯಾವ ರೀತಿಯ ಗುಣಲಕ್ಷಣಗಳುಳ್ಳವನನ್ನು ಭಕ್ತರೆನ್ನುತ್ತಾರೆ ಎಂದು ಭಕ್ತರ 33 ಲಕ್ಷಣಗಳನ್ನು ಸವಿಸ್ತಾರವಾಗಿ ವಿವರಿಸಿದ್ದಾನೆ.

**ಅದ್ವೇಷ್ಟಾ ಸರ್ವಭೂತಾನಾಂ ಮೈತ್ರಃ ಕರುಣ ಏವ ಚ ।**
**ನಿರ್ಮಮೋ ನಿರಹಂಕಾರಃ ಸಮದುಃಖ ಸುಃಖ ಕ್ಷಮೀ ॥ 13 ॥**
**ಸಂತುಷ್ಟಃ ಸತತಂ ಯೋಗೀ ಯತಾತ್ಮ ದೃಢ ನಿಶ್ಚಯಃ ।**
**ಮಯ್ಯಾರ್ಪಿತ ಮನೋಬುದ್ಧಿಃಯೋ ಮದ್ಭಕ್ತಃ ಸಮೇಪ್ರಿಯಃ ॥ 14 ॥**

**ಭಕ್ತರ 33 ಲಕ್ಷಣಗಳು :**

1) **ಅದ್ವೇಷ್ಟಾ ಸರ್ವಭೂತಾನಾಮ್** – ಯಾವ ಪ್ರಾಣಿಯನ್ನೂ ದ್ವೇಷಿಸಬೇಡ
2) **ಮೈತ್ರ** – ಮಿತ್ರತ್ವ ಭಾವ
3) **ಕರುಣ ಏವಚ** – ಕರುಣಾಮಯಿಯಾಗಿರಬೇಕು
4) **ನಿರ್ಮಮ** – ಮಮಕಾರ ಬುದ್ಧಿ ಇಲ್ಲದವನಾಗಿರಬೇಕು
5) **ನಿರಹಂಕಾರ** – ಅಹಂಕಾರ ಇರಬಾರದು
6) **ಸಮದುಃಖಸುಃಖ** – ಸುಖ ದುಃಖಗಳಲ್ಲಿ ಸಮನಾಗಿರುವವನು
7) **ಕ್ಷಮೀ** – ಕ್ಷಮೆ ಬುದ್ಧಿಯುಳ್ಳವನು
8) **ಸಂತುಷ್ಟ** – ಸರ್ವಕಾಲದಲ್ಲಿಯೂ ಸಂತುಷ್ಟನಾಗಿರುವವನು
9) **ಸತತಂ ಯೋಗಿ** – ಯಾವಾಗಲೂ ಭಕ್ತನ ಇಂದ್ರಿಯಗಳು ಭಗವಂತನಲ್ಲಿ ಒಂದಾಗಿರುವುದು
10) **ಸತತಂ ಯತಾತ್ಮ** – ಇಂದ್ರಿಯಗಳನ್ನು ಸಂಯಮ ಮಾಡಿರುವವನು
11) **ಸತತಂ ದೃಢನಿಶ್ಚಯ** – ಸದಾ ದೃಢ ನಿಶ್ಚಯನಾಗಿರುವವನು
12) **ಮಯ್ಯರ್ಪಿತ ಮನೋಬುದ್ಧಿ** – ಮನಸ್ಸು, ಬುದ್ಧಿ ಭಗವಂತನಿಗೆ ಅರ್ಪಿತವಾಗಿ–ರುವವನು
13) **ಯಸ್ಮಾನ್ನೋ ದ್ವಿಜತೇ ಲೋಕಃ** – ಯಾರಿಂದ ಲೋಕದ ಜನರು ಉದ್ವೇಗ ಹೊಂದುವುದಿಲ್ಲವೋ
14) **ಲೋಕಾನ್ನೋ ದ್ವಿಜತೇ ಚಯಃ** – ಲೋಕದ ಜನರಿಂದ ಉದ್ವೇಗವನ್ನು ಹೊಂದುವುದಿಲ್ಲವೋ





15) **ಹರ್ಷಾ ಅಮರ್ಷ, ಭಯ ಮತ್ತು ಉದ್ವೇಗ ರಹಿತ** – ಹರ್ಷ, ಅಸೂಯೆ, ಭಯ ಉದ್ವೇಗ ರಹಿತನಾದವನು
16) **ಅನಪೇಕ್ಷ** – ಅಪೇಕ್ಷಾರಹಿತನಾದವನು
17) **ಶುಚಿ, ಪವಿತ್ರ** – ಶುಚಿವಂತನೂ, ಮನಸ್ಸು – ಚಿತ್ತ ಪವಿತ್ರನಾಗಿರುವವನು
18) **ದಕ್ಷ** – ಕುಶಲ ಅಥವಾ ನಿಪುಣ
19) **ಉದಾಸೀನ** – ಶಾಸ್ತ್ರವಿಹಿತ ಅಥವಾ ಕಾಮ್ಯಕರ್ಮಗಳಿಗೆ ಉದಾಸೀನನಾಗಿರುವವನು
20) **ಗತವ್ಯಥ** – ವ್ಯಥೆ, ವ್ಯಾಕುಲತೆ, ಕೋಪ–ತಾಪ ಇಲ್ಲದವನು
21) **ಸರ್ವಾರಂಭ ಪರಿತ್ಯಾಗಿ** – ಸರ್ವ ಕರ್ಮಗಳನ್ನು ತ್ಯಾಗ ಮಾಡುವುವನು
22) **ಯೊ ನ ಹೃಷ್ಯತಿ ನ ದ್ವೇಷ್ಟಿ** – ಹರ್ಷ, ದ್ವೇಷವನ್ನು ಹೊಂದಿಲ್ಲದವನು
23) **ನ ಶೋಚತಿ ನಕಾಂಕ್ಷತಿ** – ಶೋಕ ಹಾಗೂ ಯಾವ ಬಯಕೆಯನ್ನು ಮಾಡುವುವನಲ್ಲ
24) **ಶುಭಾ ಶುಭ ಪರಿತ್ಯಾಗಿ** – ಶುಭ ಹಾಗೂ ಅಶುಭಗಳನ್ನು ತ್ಯಾಗ ಮಾಡಿರುವುವನು
25) **ಸಮಃ ಶತ್ರೌ ಚ ಮಿತ್ರೇಚ** – ಶತ್ರು ಹಾಗೂ ಮಿತ್ರರಲ್ಲಿ ಸಮ ಬುದ್ಧಿಯುಳ್ಳವವನು
26) **ಮಾನಾಪ ಮಾನಯೋ**–ಮಾನ–ಅಪಮಾನದಲ್ಲಿ ಸಮ ಬುದ್ಧಿಯುಳ್ಳವನಾಗಿರಬೇಕು
27) **ಶೀತೋಷ್ಣ ಸುಖಃದುಃಖೇಷು** – ಶೀತ–ಉಷ್ಣ, ಸುಃಖ–ದುಃಖಗಳಲ್ಲಿ ಸಮದರ್ಶಿ–ಯಾಗಿರುವವನು
28) **ಸಂಗವರ್ಜಿತಃ** – ಯಾವುದರೊಂದಿಗೂ ಸ್ನೇಹ ಬಂಧವಿರುವುದಿಲ್ಲ
29) **ತುಲ್ಯನಿಂದಾಸ್ತುತಿಃ** – ನಿಂದೆ ಮತ್ತು ಹೊಗಳಿಕೆಯನ್ನು ಸಮನಾಗಿ ಸ್ವೀಕರಿಸುವವನು
30) **ಮೌನೀ** – ಮನನಶೀಲನಾಗಿರುವವನು
31) **ಸಂತುಷ್ಟೋ ಯೇನ ಕೇನಚಿತ್** – ಜೀವನದಲ್ಲಿ ದೊರೆತಿದ್ದರಷ್ಟರಲ್ಲಿಯೇ ಸದಾ ತೃಪ್ತನಾಗಿರುವವನು
32) **ಅನಿಕೇತಃ** – ನಿಶ್ಚಿತ ವಾಸಸ್ಥಾನವಿಲ್ಲದವನೆಂದು ಅಂದರೆ, ಬಂಧನವೇ ಇಲ್ಲ
33) **ಸ್ಥಿರಮತಿಃ** – ಸ್ಥಿರವಾದ ಬುದ್ಧಿಯುಳ್ಳವನು

ಭಕ್ತಿ ಎಂದರೆ ಅದೊಂದು ನಾಟಕವಲ್ಲ. ಕೆಲವರು ಭಕ್ತನೆಂದು ಕರೆಯಲಿ ಎಂದು ಏನೇನು ನಟನೆ ಮಾಡುತ್ತಾರೆ. ವಿಭೂತಿ–ಗಂಧ–ರುದ್ರಾಕ್ಷಿ ಮಾಲೆ ಧರಿಸುವುದು, ದೇವಸ್ಥಾನಕ್ಕೆ ಹೋಗುವುದು, ನಮಸ್ಕಾರ ಮಾಡುವುದು, ಜಪ ಮಾಡುವಂತೆ ನಟಿಸುವುದು, ಇತ್ಯಾದಿ ಮಾಡುತ್ತಾರೆ. ಅದಕ್ಕೆ ಪುರಂದರದಾಸರು **"ಕರದೊಳು ಜಪಮಣಿ ಬಾಯೊಳು ಮಂತ್ರವು ಅರಿವೆಯ ಮುಸುಕನು ಮೋರೆಗೆ ಹಾಕಿ, ಪರಸತಿ, ಪರಧನಕ್ಕಾಗಿ**

**ಚಿಂತಿಸುವ ಪರಮ ವೈರಾಗ್ಯದ ಮೂರ್ತಿ ಎನಿಸುವುದು''** ಹೀಗೆ ಏನೇನು ಅವತಾರ ಮಾಡಿಕೊಳ್ಳುತ್ತಾರೆ ಎಂದು ಹೇಳಿದ್ದಾರೆ. ಇದನ್ನು ಕಠೋಪನಿಷತ್ತು ಹೀಗೆ ಹೇಳುತ್ತದೆ.

**ಅವಿದ್ಯಾಯಾ ಮಂತರೇ ವರ್ತಮಾನಾಃ ಸ್ವಯಂಧೀರಾಃ ಪಂಡಿತಂ ಮನ್ಯಮಾನಾಃ ।**

**ದಂದ್ರಮ್ಯ ಮಾಣಾಃ ಪರಿಯಂತಿ ಮೂಢಾ ಅಂದೇನೈವ ನೀಯಮಾನಾಯಥಾಂಧಾಃ ॥**

ಇದರರ್ಥ, ಏನೂ ತಿಳಿಯದಿದ್ದರೂ ತಿಳಿದವನಂತೆ ನಟಿಸಿ, ತಾವೇ ಧೀರರೆಂದೂ ಎಲ್ಲಾ ತಿಳಿದವರೆಂದೂ, ಪಂಡಿತರೆಂದೂ ಹೆಮ್ಮೆ ಪಟ್ಟುಕೊಂಡು ಮೂಢರಾಗಿದ್ದು ಯಾವ ರೀತಿಯಲ್ಲಿ ಕುರುಡನ ಜೊತೆಗೆ ಹೋಗಲ್ಪಡುವ ಇನ್ನೊಬ್ಬ ಕುರುಡನು ಅನರ್ಥ ಹೊಂದುವಂತೆ, ಹಾಳಾಗುವರು.

ಇನ್ನು ಭಗವದ್ಗೀತೆಯಲ್ಲಿ ಹೇಳಿದ ಭಕ್ತನ 33 ಲಕ್ಷಣಗಳನ್ನು ತಿಳಿದು ಅನುಭವಿಸಿ ನಾವೂ ಭಕ್ತರಾಗೋಣ, ಜ್ಞಾನಿಗಳಾಗೋಣ. ಮುಂದಿನ ಸಂಚಿಕೆಯಲ್ಲಿ ಭಕ್ತನ ಲಕ್ಷಣಗಳಲ್ಲಿ ಮೊದಲನೆಯಾದ **''ಅದ್ವೇಷ್ಟಾ ಸರ್ವಭೂತಾನಾಮ್''** ಅಂದರೆ ಎಲ್ಲಾ ಚರಾಚರ ವಸ್ತುಗಳ ಮೇಲೆ ದ್ವೇಷ ಸಾಧಿಸದೇ ಇರುವುವನು ಎಂಬರ್ಥ. ಅದನ್ನು ಮುಂದಿನ ಸಂಚಿಕೆಯಲ್ಲಿ ವಿಚಾರ ಮಾಡೋಣ. [**ಮುಂದುವರಿಯುವುದು**]

**ಓಂ ತತ್ಸತ್**

# ಕರ್ಮಾತೀತನ ಲಕ್ಷಣ

**–ಶ್ರೀ ಶಂಕರಾನಂದ ಮೂರ್ತಿ, ಬೆಂಗಳೂರು**

ಈ ವಿಶಾಲವಾದ ವಿಶ್ವದಲ್ಲಿ ಪರಮ ಪವಿತ್ರವಾದ ವಸ್ತು ಯಾವುದು? ಮಾತ್ತಾವುದೂ ಇಲ್ಲ. ಅದು ತಾನು ಪವಿತ್ರವಾಗಿದ್ದು ಮತ್ತೊಂದನ್ನೂ ಪವಿತ್ರ ಮಾಡುತ್ತದೆ. ಜ್ಯೋತಿಯು ತಾನೂ ಬೆಳಗಿ ಮತ್ತೊಂದು ಜ್ಯೋತಿಯನ್ನು ಬೆಳಗುವಂತೆ ಮಾಡುತ್ತದೆ.

**ಗಂಗಾ ಪಾಪಂ ಶಶೀತಾಪಂ ದೈನ್ಯಂ ಕಲ್ಪ ತರುಂ ಸ್ತಥಾ ।**

**ಪಾಪಂತಾಪಂಚ ದೈನ್ಯಂಚ ಘ್ನಂತಿ ಸಂತೋ ಮಹಾಶಯಾಃ ॥**

ಗಂಗೆಯಲ್ಲಿ ಸ್ನಾನ ಮಾಡಿದರೆ ಪಾಪ ನಿವಾರಣೆ ಆಗುತ್ತದೆ. ಚಂದ್ರನು ಉಷ್ಣದ ತಾಪವನ್ನು ನಿವಾರಣೆ ಮಾಡುತ್ತಾನೆ. ಕಲ್ಪತರುವು ದೈನ್ಯತೇ–ದೀನತ್ವ ಅಂದರೆ ಬಡತನವನ್ನು ನಿವಾರಣೆ ಮಾಡುತ್ತದೆ. ಆದರೆ ಬ್ರಹ್ಮಜ್ಞಾನಿಯು ಸರ್ವದುಃಖವನ್ನೂ ನಿವಾರಣೆ ಮಾಡುತ್ತಾನೆ. ಆ ಬ್ರಹ್ಮಜ್ಞಾನಿಯೇ ಲೋಕದಲ್ಲಿ ಪವಿತ್ರವಾದ ವಸ್ತು. ಅವನಿಗೆ ಸರಿಸಮಾನ ಪವಿತ್ರ ಮಾಡುವ ವಸ್ತು ಮತ್ತೊಂದಿಲ್ಲ. ಆಚಾರ್ಯ ಶಂಕರರು ಅ ಬ್ರಹ್ಮಜ್ಞಾನಿ ಮಹಾಪುರುಷನನ್ನು **''ದೃಷ್ಟಾಂತೋ ನೈವ ದ್ರಷ್ಟಃ ತ್ರಿಭವನ ಜಠರೇ ಸದ್ಗುರೋ ಜ್ಞಾನ ಧಾತುಃ''** ಜ್ಞಾನವನ್ನು ದಾನ ಮಾಡುವ ಆ ಸದ್ಗುರುವಿಗೆ ದೃಷ್ಟಾಂತ ಕೊಡಲು ಈ

---

**''ನ ಕರ್ಮಣಾನ ಪ್ರಜಯಾಧನೇನ ತ್ಯಾಗೇನೈಕೇ ಅಮೃತತ್ವ ಮಾನಶುಃ''**

ಕರ್ಮದಿಂದಾಗಲೀ, ಮಕ್ಕಳಿಂದಾಗಲೀ, ಹಣ, ವಸ್ತು, ವಾಹನ, ಹೆಂಡತಿಯಿಂದಾಗಲೀ ಶಾಂತಿ ಸುಖವಿಲ್ಲ. ಕೇವಲ ತ್ಯಾಗದಿಂದಲೇ ಅಮೃತತ್ವ ದೊರೆಯುವುದು (ಕೈವಲ್ಯ ಉ.)



ಮೂರು ಲೋಕದಲ್ಲಿಯೂ ಯಾವುದೂ ಇಲ್ಲ ಎಂದು ಹೇಳಿದ್ದಾರೆ. ಏಕೆ? ಅವನು **''ಬ್ರಹ್ಮವಿದ್ ಬ್ರಹ್ಮೈವ ಭವತಿ''** ಬ್ರಹ್ಮನನ್ನು ತಿಳಿದು ಬ್ರಹ್ಮವೇ ಆಗಿದ್ದಾನೆ.

**ಪ್ರ.: ಇದು ನಮ್ಮ ಅನುಭವಕ್ಕೆ ವಿರೋಧವಲ್ಲವೆ? ಗಡಿಯಾರವನ್ನು ತಿಳಿದವನು ಗಡಿಯಾರ ಆಗುತ್ತಾನೆಯೇ? ಹಾಗೆ ಬ್ರಹ್ಮವನ್ನು ತಿಳಿದು ಹೇಗೆ ಬ್ರಹ್ಮ ಆಗುತ್ತಾನೆ?**

**ಉ.:** ಹಾಗಲ್ಲ ಸಮುದ್ರವನ್ನು ಸೇರಿದ ನದಿಯು ತನ್ನ ನಾಮ ರೂಪ ಬಿಟ್ಟು ಸಮುದ್ರವೇ ಆಗುವಂತೆ ಅಗ್ನಿಯಲ್ಲಿ ಬಿದ್ದ ಕಟ್ಟಿಗೆಯು ಅಗ್ನಿಯೆ ಆಗುವಂತೆ. ಬಲೂನಿನಲ್ಲಿದ್ದ ಗಾಳಿಯು ಬಲೂನು ಇರುವರೆಗೆ ಬೇರೆ ಆಗಿ ಇರುವಂತೆ ಕಂಡು, ಬಲೂನು ಹೊಡೆದಾಕ್ಷಣ ಅದರಲ್ಲಿರುವ ಗಾಳಿಯು ಮಹಾಗಾಳಿಯಲ್ಲಿ ಒಂದಾಗುವಂತೆ ಬ್ರಹ್ಮವನ್ನು ತಿಳಿದ ಬುದ್ಧಿಯು ಬ್ರಹ್ಮವೇ ಆಗುತ್ತದೆ. ಏಕೆಂದರೆ ಬ್ರಹ್ಮದಿಂದ ನಮ್ಮನ್ನು ಬೇರೆ ಮಾಡಿರುವುದು ಈ ಬುದ್ಧಿಯೆ.

**ಪ್ರ. :** ಈ ಬುದ್ಧಿಯು ಅನೇಕ ಜನ್ಮಜನ್ಮಾಂತರವನ್ನು ಪಡೆದು ಅನೇಕ ಜನ್ಮಗಳಲ್ಲಿ ಹುಟ್ಟಿ, ಸುತ್ತಿ ಆ ಜನ್ಮಗಳ ಸಂಸ್ಕಾರದಿಂದ ಅದು ಅಶುದ್ಧಿಯಾಗಿರುತ್ತದೆ. ಇದೇ ಬುದ್ಧಿ ವಾಸನೆ. ಬ್ರಹ್ಮವನ್ನು ತಿಳಿಯಬೇಕಾದ ಬುದ್ಧಿಯು ಅಶುದ್ಧವಾಗಿ ಬ್ರಹ್ಮ ಚಿಂತನೆಗೆ ಅವಕಾಶ ಮಾಡಿಕೊಡದೆ ಬ್ರಹ್ಮಜ್ಞಾನಕ್ಕೆ ಅಡ್ಡಿಯಾಗಿರುತ್ತದೆ. ಈಶಾವಾಸ್ಯೋಪನಿಷತ್ತಿನಲ್ಲಿ

**ಹಿರಣ್ಮಯೇನ ಪಾತ್ರೇಣ ಸತ್ಯಸ್ಯಾಪಿಹಿತಂಮುಖಂ ।**

**ತತ್ತ್ವಂಪೂಷನ್ನಪಾವೃಣು ಸತ್ಯಧರ್ಮಾಯ ದೃಷ್ಟಯೇ ॥**

ಹಿರಣ್ಮಯ ಪಾತ್ರೆಯಿಂದ ಸತ್ಯದ ಮುಖವು ಮುಚ್ಚಲ್ಪಟ್ಟಿದೆ. ಹೇ ಪೋಷಣೆ ಮಾಡುವ ಪರಮಾತ್ಮನೇ ಆ ಸತ್ಯದ ಮುಖವನ್ನು ಮುಚ್ಚಿರುವ ಆ ಹಿರಣ್ಮಯ ಪಾತ್ರೆ ರೂಪ, ವಾಸನಾರೂಪ ಬುದ್ಧಿಯನ್ನು ದೂರ ಮಾಡಿ ಆ ಸತ್ಯದ ಮುಖವನ್ನು ತೋರಿಸು ಎಂದು ಆ ಉಪನಿಷತ್ತಿನ ಮಂತ್ರ ಬೋಧಿಸುತ್ತದೆ. ಆದ್ದರಿಂದ ಅಶುದ್ಧವಾದ ಬುದ್ಧಿಯೇ ಪರಮಾತ್ಮನನ್ನು ಕಾಣದಂತೆ ಮಾಡಿದೆ. ಪರಮಾತ್ಮನಿಂದ ದೂರ ಮಾಡಿದೆ. ಸ್ವತಃ ಗಾಳಿಯೇ ಆಗಿದ್ದ ಬಲೂನು ಒಳಗಿನ ಗಾಳಿಯನ್ನು ಬಲೂನು ಬೇರೆ ಬೇರೆ ಮಾಡಿರುವಂತೆ – ಸದಾ ಮಹಾಕಾಶವೇ ಆಗಿರುವ ಘಟಾಕಾಶವನ್ನು ಘಟ ಎಂಬ ಉಪಾಧಿಯು ಬೇರೆ ಮಾಡಿರುವಂತೆ ಸ್ವತಃ ಬ್ರಹ್ಮವೇ ಆಗಿರುವ ನನ್ನನ್ನು ದೇಹವೆಂದೂ, ಹುಟ್ಟುವವನೆಂದೂ, ಸಾಯುವವನೆಂದೂ, ಕರ್ಮಕ್ಕೆ ಕರ್ತೃವೆಂದು – ಭೋಗಿ ಎಂದೂ ಮಾಡಿದೆ – ಆ ಬುದ್ಧಿ ವಾಸನೆಯೆ ಬ್ರಹ್ಮಜ್ಞಾನಕ್ಕೆ ಪ್ರತಿಬಂಧಕ.

**ಪ್ರ.: ಹಾಗಾದರೆ ಆ ಬುದ್ಧಿಯನ್ನು ಶುದ್ಧಿ ಮಾಡುವುದು ಹೇಗೆ?**

**ಉ. :** ಬುದ್ಧಿಯಲ್ಲಿ ಮೂರು ದೋಷಗಳಿವೆ. ಅದನ್ನು ಮಲ–ವಿಕ್ಷೇಪ–ಆವರಣ ಎನ್ನುತ್ತಾರೆ.

---

**''ಅಹಮಾತ್ಮ ಗುಡಾಕೇಶ ಸರ್ವಭೂತ ಶಯಸ್ಥಿತಃ''**

ಎಲ್ಲಾ ಭೂತಗಳಲ್ಲಿ ನಾನೆಂದು ವ್ಯಕ್ತವಾಗುವ ಆತ್ಮನೆ ಪರಮಾತ್ಮ, ಅದೇ ಭಗವಂತನ ನಿಜವಾದ ಸ್ವರೂಪ (ಗೀತೆ 10–20)

**ಪ್ರ: ಮಲ ದೋಷವೆಂದರೇನು? ಅದು ಹೇಗೆ ಬಂದಿತು? ಏಕೆ ಬಂದಿತು? ಯಾವಾಗ ಬಂದಿತು?**

**ಉ.:** ಈ ಮೂರು ದೋಷಗಳೇ ಪರಮೇಶ್ವರ ಸಾಕ್ಷಾತ್ಕಾರಕ್ಕೆ ಪ್ರತಿಬಂಧಕಗಳು. ಇವು ಅಂತಃಕರಣದಲ್ಲಿ ಮನೆ ಮಾಡಿಕೊಂಡಿರುತ್ತವೆ. ಅವುಗಳ ಸ್ಥಾನ ಅಂತಃಕರಣವೇ. ಈ ಅಂತಃಕರಣವು ಎಂದೂ ಸತ್ತಿಲ್ಲ. ಇದು ಅನೇಕ ಸ್ಥೂಲ ದೇಹಗಳನ್ನು ಸೇರುವುದು ಮತ್ತು ಅಲ್ಲಿಂದ ಬಿಟ್ಟು ಮತ್ತೊಂದು ದೇಹ ಸೇರುವುದು. ಈ ಅಂತಃಕರಣ ಎಂದರೆ ಪಂಚಜ್ಞಾನೇಂದ್ರಿಯಗಳು, ಪಂಚಕರ್ಮೇಂದ್ರಿಯಗಳು, ಪಂಚಪ್ರಾಣವಾಯುಗಳು ಮನಸ್ಸು ಮತ್ತು ಬುದ್ಧಿ ಈ ಹದಿನೇಳು ತತ್ತ್ವಸಂಘಾತವೇ ಸೂಕ್ಷ್ಮದೇಹ ಅಥವಾ ಅಂತಃಕರಣ, ಇದೇ ಸಂಚಾರಮೂರ್ತಿ. ಇದು ಸ್ಥೂಲದೇಹ ಸೇರುವುದು ಅಲ್ಲಿ ಕರ್ಮ ಮಾಡುವುದು – ಭೋಗ ಮಾಡುವುದು, ರಾಗ ದ್ವೇಷ ಸುಖದುಃಖ ಅನುಭವಿಸುವುದು ಕಾಲವು ಮೀರಿದ ಕೂಡಲೇ ಆ ಸ್ಥೂಲದೇಹ ಬಿಡುವುದು ಮತ್ತೊಂದು ದೇಹಕ್ಕೆ ಹೋಗುವುದು. ಅದು ಸ್ಥೂಲ ದೇಹದಲ್ಲಿದ್ದಾಗ ಅನೇಕ ಪಾಪ ಪುಣ್ಯ ಕರ್ಮ ಮಾಡುತ್ತದೆ. ಯಾವ ಕರ್ಮ ಮಾಡಿದರೂ ಫಲ ಬರಲೇಬೇಕು. ಫಲ ಕೊಡದ ಕರ್ಮ ಯಾವುದೂ ಇಲ್ಲ. ಆ ಫಲವನ್ನು ಭೋಗಿಸಲೇಬೇಕು. ಫಲ ಭೋಗಿಸುವಾಗ ವಾಸನೆ ಬಿಟ್ಟು ಹೋಗುತ್ತದೆ. ಆ ವಾಸನೆಯೇ ಪುನರ್ಜನ್ಮ ಕೊಡುವುದು. ಹೀಗೆ ಜನ್ಮ–ಕರ್ಮ–ಫಲ–ಭೋಗ–ವಾಸನೆ ಮತ್ತೆ ಜನ್ಮ. ಹೀಗೆ ಇದು ಅಪಸರ್ಪ ಚಕ್ರ. ಈ ಚಕ್ರಕ್ಕೆ ಎಲ್ಲಾ ಜೀವಿಗಳೂ ಸಿಕ್ಕಿ ಹಾಕಿಕೊಂಡಿರುತ್ತವೆ.

ಜೀವಿಯು ಭೋಗಕ್ಕಾಗಿ ಕರ್ಮ ಮಾಡುತ್ತಿರುವಾಗ ಆ ಕರ್ಮಗಳು ಪಾಪಕರ್ಮಗಳೂ ಆಗಿರಬಹುದು – ಪುಣ್ಯಕರ್ಮಗಳೂ ಆಗಿರಬಹುದು. ಒಂದೊಂದು ಜನ್ಮಕ್ಕೂ ಅಪಾರವಾದ ಈ ಪಾಪಪುಣ್ಯ ಕರ್ಮಗಳು ನಡೆಯುತ್ತಿರುತ್ತವೆ. ಅವೆಲ್ಲಾ ಕರ್ಮಗಳು ಒಂದು ಕಡೆ ಸಂಗ್ರಹವಾಗುತ್ತಿರುತ್ತವೆ. ಈ ಸಂಗ್ರಹವಾದ ಕರ್ಮಗಳು ಭೋಗಿಸದೆ ನಿವಾರಣೆ ಆಗುವುದೆ ಇಲ್ಲ. **"ನ ಭೋಕ್ತುಂ ಕ್ಷೀಯತೇ ಕರ್ಮ"** ಭೋಗ ಮಾಡಿಯೇ ಆ ಕರ್ಮಗಳನ್ನು ಮುಗಿಸಬೇಕು. ಇಲ್ಲವೇ ಜ್ಞಾನದಿಂದ ಸುಟ್ಟು ಹಾಕಬೇಕು. ಆ ಕರ್ಮಗಳ ರಾಶಿಯ ನಿವಾರಣೆಗೆ ಈ ಎರಡೇ ಮಾರ್ಗ. ಒಂದೊಂದು ಜನ್ಮದಲ್ಲಿ ಮಾಡಿದ ಪಾಪ ಪುಣ್ಯಕರ್ಮಗಳ ರಾಶಿ ಬೆಟ್ಟದಷ್ಟು. ಉದಾಹರಣೆಗೆ ಮನುಷ್ಯನಾಗಿ ಹುಟ್ಟಿದ್ದೀಯೆ ಅನೇಕ ಸೊಳ್ಳೆಗಳನ್ನು ಕೊಲ್ಲುತ್ತೀಯೆ ಅಂದುಕೊಳ್ಳಿ. ಅ ಒಂದು ಸೊಳ್ಳೆಯೂ ನಿನ್ನನ್ನು ಮತ್ತೊಂದು ಜನ್ಮದಲ್ಲಿ ಕೊಲ್ಲಲೇ ಬೇಕು. ಒಂದು ಸೊಳ್ಳೆಯಿಂದ ಕೊಲ್ಲಲ್ಪಡಲು ಒಂದು ಜನ್ಮದಂತೆ ಅನೇಕ ಸೊಳ್ಳೆಗಳಿಂದ ಕೊಲ್ಲ್ಪಡಲು ಎಷ್ಟು ಜನ್ಮ

**"ಜಂತೂನಾಂ ನರಂ ಜನ್ಮ ದುರ್ಲಭಂ"**
ಜಗತ್ತಿನ ಎಲ್ಲಾ ಜೀವರಾಶಿಗಳಲ್ಲಿ ಮನುಷ್ಯ ಜನ್ಮ ಬಹು ದುರ್ಲಭ
(ವಿವೇಕ ಚೂಡಾಮಣಿ)



ಎತ್ತಬೇಕು? ಹೀಗೆ ಅನೇಕ ಜನ್ಮಗಳು ಬರುತ್ತಾ ಇರುತ್ತವೆ. ಆ ಎಲ್ಲಾ ಜನ್ಮದಲ್ಲಿ ಮಾಡಿದ ಕರ್ಮದ ರಾಶಿಯು ಜಾಸ್ತಿ ಆಗುತ್ತಾ ಹೋಗುತ್ತದೆ. ಇದು ಒಂದು ಕಡೆ ಶೇಖರವಾಗುತ್ತದೆ. ಇದೇ ಸಂಚಿತ ಕರ್ಮವೆಂದು ಶಾಸ್ತ್ರವು ಹೇಳುತ್ತದೆ. ಇದನ್ನು ಭೋಗಿಸಿಯೇ ಮುಗಿಸಬೇಕು. ಭೋಗಿಸಬೇಕಾದರೆ ಹುಟ್ಟಲೇಬೇಕು. ಹುಟ್ಟಿದನೆಂದರೆ ಕರ್ಮ ಮಾಡಲೇಬೇಕು. ಕರ್ಮ ಮಾಡಿದನೆಂದರೆ ಫಲ ಬಂದೇ ತೀರುತ್ತದೆ. ಆ ಫಲ ಭೋಗಿಸಲೇಬೇಕು. ಆ ಭೋಗವು ವಾಸನೆ ಬಿಟ್ಟು ಹೋಗುತ್ತದೆ. ಆ ವಾಸನೆ ಜನ್ಮ ಕೊಡುತ್ತದೆ.

ಈ ಸಂಚಿತ ಕರ್ಮವೇ ಮಲ ದೋಷವೆನಿಸುತ್ತದೆ. ಈ ಸಂಚಿತ ಕರ್ಮ ಫಲವನ್ನು ಭೋಗಿಸಿಯೇ ಮುಗಿಸಬೇಕು. ಹೀಗೆ ಭೋಗ ನಡೆಯುತ್ತಿರುವಾಗ ಮತ್ತೆ ಕರ್ಮ ಮಾಡಬೆಕು. ಇದೇ ಆಗಾಮಿ ಕರ್ಮ ಎಂದು ಕರೆಸಿಕೊಳ್ಳುತ್ತದೆ. ಸಂಚಿತ ಕರ್ಮ ರಾಶಿಯಲ್ಲಿ ಜನ್ಮ ತಾಳುವಾಗ ಯಾವುದೋ ಒಂದು ಭಾಗ ತೆಗೆದುಕೊಂಡು ಹುಟ್ಟುತ್ತೀಯೆ. ಇದು ಪ್ರಾರಬ್ಧಕರ್ಮ ಎನಿಸುತ್ತದೆ. ಸಂಚಿತ ಕರ್ಮದಲ್ಲಿ ಎಷ್ಟು ಭಾಗ ಕರ್ಮವನ್ನು ತೆಗೆದುಕೊಂಡು ಬಂದಿದ್ದೀಯೋ ಆ ಕರ್ಮದ ರಾಶಿಯು ಮುಗಿಯುವವರೆಗೆ ಮಾತ್ರ ಇರುತ್ತೀಯೆ. ಆ ಪ್ರಾರಬ್ದ ಕರ್ಮದ ರಾಶಿ ಮುಗಿದ ತಕ್ಷಣವೇ ಆ ದೇಹ ಬಿಟ್ಟು ಹೋಗುತ್ತೀಯೆ.

**ಉದಾಹರಣೆ :** ಒಬ್ಬ ರೈತ ವ್ಯವಸಾಯ ಮಾಡಿದ. 100 ಕ್ವಿಂಟಾಲ್ ಭತ್ತ ಬೆಳೆದ. ಮುಂದೆ ವ್ಯವಸಾಯ ಮಾಡುವಾಗ ಬೇಕೆಂದು ಆ ನೂರು ಕ್ವಿಂಟಾಲ್ ಭತ್ತದಲ್ಲಿ 10 ಕ್ವಿಂಟಾಲ್ ಭತ್ತ ಬೇರೆ ಇಡುತ್ತಾನೆ. ಆ ಭತ್ತವನ್ನು ಉಪಯೋಗಿಸುತ್ತಾ ಮತ್ತೆ ವ್ಯವಸಾಯ ಮಾಡುತ್ತಾನೆ. ಮತ್ತೆ 80 ಕ್ವಿಂಟಾಲ್ ಭತ್ತ ಬೆಳೆಯುತ್ತಾನೆ. ಅವೆಲ್ಲವನ್ನು ಹಿಂದೆ ಹಾಕಿದ ಕಣಜ 90 ಕ್ವಿಂಟಾಲ್ ಜೊತೆಗೆ 80 ಕ್ವಿಂಟಾಲ್ ಹಾಕುತ್ತಾನೆ. ಮುಂದೆ ವ್ಯವಸಾಯ ಮಾಡುವಾಗ ತನ್ನ ಆಹಾರಕ್ಕಾಗಿ 170 ಕ್ವಿಂಟಾಲ್‌ನಲ್ಲಿ 10 ಕ್ವಿಂಟಾಲ್ ತೆಗೆದುಕೊಳ್ಳುತ್ತಾನೆ. ಮತ್ತೆ ವ್ಯವಸಾಯ ಮಾಡುತ್ತಾನೆ. ಹೀಗೆ ಪ್ರತಿ ವರ್ಷ ಬೆಳೆದ ಭತ್ತವನ್ನು ಸಂಗ್ರಹ ಮಾಡುತ್ತಾನಲ್ಲ ಹಾಗೆ. ಅನೇಕ ಜನ್ಮದಲ್ಲಿ ಸಂಗ್ರಹಿಸಿದ ಕರ್ಮ ಅದೇ ಸಂಚಿತ ಕರ್ಮದ ರಾಶಿ. ಅದರಲ್ಲಿ ಪ್ರತಿವರ್ಷ ಯಾವುದೋ ಒಂದು ಭಾಗ ಭೋಗಕ್ಕಾಗಿ ತೆಗೆದು–ಕೊಳ್ಳುತ್ತಾನಲ್ಲ ಅದೇ ಪ್ರಾರಬ್ಧಕರ್ಮ. ಅದನ್ನು ಭೋಗ ಮಾಡುತ್ತಾ ಮುಂದೆ ಕರ್ಮ ಮಾಡುತ್ತಾನಲ್ಲ ಅದೇ ಆಗಾಮಿ ಕರ್ಮ. ಈ ಎಲ್ಲಾ ಕರ್ಮದ ರಾಶಿಯೇ ಮಲದೋಷ.

ಹೀಗೆ ಸಂಗ್ರಹವಾದ ಕರ್ಮ ರಾಶಿಯನ್ನು ಭೋಗಿಸುವುದಕ್ಕಾಗಿ ಪುನಃ ಪುನಃ ಹುಟ್ಟುತ್ತಾನೆ. ತಾನು ಸಂಚಿತ ಕರ್ಮರಾಶಿಯಲ್ಲಿ ಆರಿಸಿಕೊಂಡು ತಂದ ಪ್ರಾರಬ್ಧ ಕರ್ಮ

**"ಮುಕ್ತಿರ್ನೋ ಶತಕೋಟಿ ಜನ್ಮ ಸುಕೃತ್ಯೈಃ ಪುಣ್ಯೈರ್ವಿನಾ ಲಭ್ಯತೇ'**
ಮೋಕ್ಷವು ನೂರು ಕೋಟಿ ಜನ್ಮಗಳಲ್ಲಿ ಸಂಪಾದಿಸಿದ ಪುಣ್ಯವಿಲ್ಲದೇ
ಲಭಿಸುವುದಿಲ್ಲ (ವಿವೇಕ ಚೂಡಾಮಣಿ)

ಮುಗಿದ ತಕ್ಷಣ ಸಾಯುತ್ತಾನೆ. ಈ ಸಾವು ಮೂರು ವಿಧವಾದ ಜನರಿಗೆ ಸಂಭವಿಸಿ ಪುನಃ ಹುಟ್ಟುತ್ತಾನೆ. ಇದೇ ಕರ್ಮ ಚಕ್ರ.

**ಪ್ರ. : ನಾಲ್ಕು ರೀತಿಯ ಜನಗಳು ಯಾರು? ಹಾಗೂ ಅವರ ಸ್ವರೂಪವೇನು?**

**ಉ.: 1) ಈ ಸೃಷ್ಟಿಯಲ್ಲಿ ಕರ್ಮ ಭ್ರಷ್ಟರೆಂದೂ. 2) ಕರ್ಮಿಗಳೆಂದೂ, 3) ಕರ್ಮಯೋಗಿ–ಗಳೆಂದೂ, 4) ಕರ್ಮಾತೀತರೆಂದೂ** ನಾಲ್ಕು ವಿಧವಾದ ಜೀವಿಗಳು ಇದ್ದಾರೆ.

**1) ಕರ್ಮ ಭ್ರಷ್ಟರು (ಅನೀತಿವಂತರು) :**

ಇನ್ನೊಬ್ಬರ ಕರ್ಮಫಲವನ್ನು ತಿನ್ನುವುವನೇ ಕರ್ಮಭ್ರಷ್ಟ. ಇವರು ಅಸುರೀ ಭಾವದವರು, ಮೋಹಿನೀ ಭಾವದವರು, ರಾಕ್ಷಸಿ ಭಾವದವರೆಂದು ಇವರನ್ನು ಕರೆಯಬಹುದು. ಇವರಿಗೆ ಧರ್ಮವೂ ಅಧರ್ಮವೂ ತಿಳಿದಿರುವುದಿಲ್ಲ. ಇವರಿಗೆ ಬಾಹ್ಯ ಶೌಚವಾಗಲಿ ಅಂತಃ ಶೌಚವಾಗಲೀ ಇರುವುದಿಲ್ಲ. ರಾಗ ದ್ವೇಷದಿಂದ ತುಂಬಿರುತ್ತಾರೆ. ಇವರಿಗೆ ಧರ್ಮಶಾಸ್ತ್ರದ ಆಚಾರವಾಗಲಿ–ಸತ್ಯವಾಗಲೀ ಇರುವುದಿಲ್ಲ. ಇವರು ಅನ್ಯತವಾದಿಗಳು, ಇವರನ್ನು ಪಾಮರರೆಂದೂ, ಚಾರ್ವಾಕರೆಂದೂ, ನಾಸ್ತಿಕರೆಂದೂ ತಿಳಿಯಬಹುದು. ಇವರು ಈ ಜಗತ್ತೂ ಅಸತ್ಯವೆಂದೂ–ಅಪ್ರತಿಷ್ಟವೆಂದೂ ಈ ಜಗತ್ತಿನಲ್ಲಿ ಈಶ್ವರನೂ ಇಲ್ಲ ಯಾರೂ ಇಲ್ಲವೆಂದೂ – ಈ ಜಗತ್ತು ಸ್ತ್ರೀಪುರುಷರ ಸಂಯೋಗದಿಂದ ಉಂಟಾಗಿದೆ ಎಂದೂ ಕಾಮನೆಯಿಂದ ಇರುವುದೆಂದೂ – ಈ ಜಗತ್ತು ಕೇವಲ ಭೋಗ ಅನುಭವಿಸುವುದಕ್ಕಾಗಿ ಇದೆ ಎಂದು ತಿಳಿದಿರುತ್ತಾರೆ. ಇವರು ಹೀನ ಸ್ವಭಾವದ ಮಂದ ಬುದ್ಧಿಯವರು. ಎಲ್ಲರಿಗೂ ಅಹಿತವನ್ನುಂಟು ಮಾಡುವ ಕ್ರೂರಕರ್ಮಿಗಳು. ಇವರು ಕಾಮವನ್ನೇ ಆಶ್ರಯಿಸಿರುತ್ತಾರೆ. ಇವರಿಗೆ ದಂಭ, ಮಾನ, ಮದದಿಂದ ತುಂಬಿ ಅಶುದ್ಧಿ ಆಚರಣೆಯುಳ್ಳವರಾಗಿ ಮೋಹದಿಂದ ವೇದ ವಿರುದ್ಧ ಕರ್ಮಗಳನ್ನೇ ಮಾಡುತ್ತಿರುತ್ತಾರೆ. ಇವರು ವಿಷಯ ಚಿಂತನೆಯ ದಾಸರು. ಇವರಿಗೆ ವಿಷಯ ಭೋಗವೇ ಪರಮಪುರುಷಾರ್ಥ. ಅದರಲ್ಲೇ ಆನಂದವಿದೆ ಎಂದು ತಿಳಿದಿರುತ್ತಾರೆ. ನೂರಾರು ಆಸೆಗಳಿಂದ ಬಂಧಿತರಾಗಿರುತ್ತಾರೆ. ಕಾಮಕ್ರೋಧಗಳಿಂದ ತುಂಬಲ್ಪಟ್ಟವರಾಗಿ – ಆ ಕಾಮಭೋಗಗಳ ಪೂರೈಕೆಗಾಗಿ ಕಪಟ–ಮೋಸ ಬಲತ್ಕಾರದಿಂದ ಹಣವನ್ನು ಸಂಗ್ರಹಿಸುತ್ತಾರೆ. ನಾನು ಯಜ್ಞ ಮಾಡುವವನು – ದಾನ ಮಾಡುವವನು ಎಂದು ಅಜ್ಞಾನ ಯುಕ್ತರಾಗಿ – ಶಾಸ್ತ್ರ ವಿಧಿಗಳನ್ನು ಅನುಸರಿಸದೆ ಯಜ್ಞ–ಯಾಗಾದಿ ಮಾಡುತ್ತಾರೆ. ಇವರು ಅಹಂಕಾರ – ಬಲ, ದರ್ಪ –ಕಾಮ, ಕ್ರೋಧವನ್ನು

---

**''ಮಯ್ಯೇವ ಮನ ಆಧತ್ಸ್ವ ಮಹಿಬುದ್ಧಿಂ ನಿವೇಶಯ''**

ಮನಸ್ಸನ್ನು ಹಾಗೂ ಬುದ್ಧಿಯನ್ನು ಭಗವಂತನಿಗೆ ಅರ್ಪಣೆ ಮಾಡಬೇಕು



ಆಶ್ರಯಿಸಿರುತ್ತಾರೆ. ಇವರು ಪಾಪಚಾರಿಗಳು – ಕ್ರೂರ ಕರ್ಮಿಗಳು – ನರಾಧಮರು. ಇವರು ಪದೇ, ಪದೇ, ಆಸುರೀ ಯೋನಿಯಲ್ಲಿಯೇ ಹುಟ್ಟುತ್ತಾರೆ. ಇವರೇ ಕರ್ಮ ಭ್ರಷ್ಟರು. ಇವರು ಪ್ರಾರಬ್ಧ ತೀರಿದ ಬಳಿಕ ಸಾಯುತ್ತಾರೆ. ಇವರು ಅಂತಃಕರಣವು ಅಧೋಮುಖವಾಗಿ ಪ್ರಾಣ ಪ್ರಯಾಣ ಮಾಡುತ್ತದೆ. ಇವರು ಯಾವ ಲೋಕಕ್ಕೂ ಹೋಗುವ ಅಗತ್ಯತೆ ಇಲ್ಲ. ಇವರ ಗತಿಯನ್ನು ಈಶಾವಾಸ್ಯೋಪನಿಷತ್ತು ಹೀಗೆ ಹೇಳುತ್ತದೆ.

**ಅಸೂರ್ಯಾನಾಮ ತೇಲೋಕಾಃ ಅಂಧೇನ ತಮಸಾವೃತಾಃ ।**

**ತಾಂಸ್ತೇ ಪ್ರೇತ್ಯಾಭಿಗಚ್ಛಂತಿ ಯೇ ಕೇ ಚಾತ್ಮ ಹನೋಜನಾಃ ॥**

ಅಂತಹವರು ಸೂರ್ಯನೇ ಇಲ್ಲದ ಅಂಧಕಾರ ಲೋಕದಲ್ಲಿ ಅಲ್ಲಿಯೇ ಪ್ರೇತ್ಯರಾಗಿ ಹುಟ್ಟುತ್ತಾರೆ. ಇವರು ಆತ್ಮಘಾತಕರು. ಅಲ್ಲಿಯೇ ತೃಣಜಲಕ ಹುಳುವಿನಂತೆ ಈ ದೇಹ ಬಿಡುವುದು, ಮತ್ತೊಂದು ದೇಹ ಸೇರುವುದು. ಹೀಗೆ ಸೊಳ್ಳೆ – ನೊಣ – ಗೊದ್ದ – ಇರುವೆ – ಕ್ರಿಮಿಕೀಟ ಇತ್ಯಾದಿಯಾಗಿ ಹುಟ್ಟುತ್ತಾರೆ.

ಇನ್ನು ಎರಡನೇ ವಿಧವಾದ ಕರ್ಮಿಗಳು, ಶಾಸ್ತ್ರವಿಹಿತ ಕರ್ಮವನ್ನೇ ಮಾಡುತ್ತಾರೆ. ಯಜ್ಞಯಾಗಾದಿಗಳನ್ನೂ ಮಾಡುತ್ತಾರೆ. ದಾನ ಧರ್ಮಾದಿಗಳನ್ನೂ ಮಾಡುತ್ತಾರೆ. ಆದರೆ ನಾನು ಮಾಡುತ್ತೇನೆಂದೂ ಅಹಂಕಾರವನ್ನು ಸೇರಿಸಿ ಮಾಡುತ್ತಾರೆ. ಇದೇ ಇವರಲ್ಲಿರುವ ದೋಷ. ಕರ್ಮ ಬಂಧನದಲ್ಲಿ ಸಿಕ್ಕಿ ಹಾಕಿಕೊಳ್ಳುತ್ತಾರೆ. ಈ ದೋಷದಿಂದ ಇವರು ಸ್ಥೂಲ ದೇಹ ತ್ಯಜಿಸಿ ಆಕಾಶ–ಸೂರ್ಯ ಲೋಕದಿಂದ –ಚಂದ್ರಲೋಕ– ಅಲ್ಲಿಂದ ಪರ್ಜನ್ಯ ಅಂದರೆ ಮಳೆ ರೂಪವಾಗಿ ಪೃಥ್ವಿಯಲ್ಲಿ ಸೇರುತ್ತಾರೆ. ಪೃಥ್ವಿಯಲ್ಲಿ ಸಸ್ಯ ರೂಪವಾಗಿ ಅವರ ಕರ್ಮಕ್ಕೆ ತಕ್ಕಂತೆ ಪುರುಷನಲ್ಲಿ ಅನ್ನ ರೂಪವಾಗಿ ಸೇರಿ ವೀರ್ಯವಾಗಿ ತನ್ನ ಸ್ವ ಸ್ತ್ರೀಯಲ್ಲಿ ವೀರ್ಯ ಸಿಂಚನೆಯಾದಾಗ ಸ್ತ್ರೀ ಯೋನಿಯನ್ನು ಸೇರಿ ಅಲ್ಲಿ 9–10 ತಿಂಗಳು ನರಕವನ್ನು ಅನುಭವಿಸಿ ಮತ್ತೆ ಭೂಮಿಗೆ ಬರುತ್ತಾರೆ. ಮತ್ತೆ ಕರ್ಮ ಮಾಡುತ್ತಾರೆ, ಫಲ ಭೋಗಿಸುತ್ತಾರೆ – ವಾಸನೆಯಿಂದ ಪುನಃ ಆಕಾಶ–ಸೂರ್ಯ ಮಂಡಲ ಚಂದ್ರ – ಪರ್ಜನ್ಯ ಪೃಥ್ವಿ–ಪುರುಷ ಶರೀರ ನಂತರ ಸ್ತ್ರೀಯೋನಿ ನಂತರ ಹುಟ್ಟು ಹೀಗೆ ತಿರುಗುತ್ತಾ ಇರುತ್ತಾರೆ. ಇದು ಕರ್ಮಿಗಳ ವಿಷಯ.

ಮುಂದಿನ ಸಂಚಿಕೆಯಲ್ಲಿ ಕರ್ಮಯೋಗಿ ಹಾಗೂ ಕರ್ಮಾತೀತನ ಲಕ್ಷಣವನ್ನು ತಿಳಿದುಕೊಳ್ಳೋಣ. [**ಮುಂದುವರಿಯುವುದು**]

**ಓಂ ತತ್ಸತ್**

---

**''ಸರ್ವ ಭೂತ ಹಿತೇ ರತಾಃ''**

ಸರ್ವಭೂತಗಳಲ್ಲಿ ಹಿತವನ್ನು ಬಯಸುವ (ಗೀತೆ 5–15)

# "ಕೈವಲ್ಯೋಪನಿಷತ್"

**– ಶ್ರೀ ಪದ್ಮಪಾದಚಾರ್ಯ, ಬೆಂಗಳೂರು**

ಉಪನಿಷತ್ ಎಂದರೆ ಬ್ರಹ್ಮವಿದ್ಯೆ. ಭಾರತೀಯ ಸನಾತನ ವಿದ್ಯೆಯೇ ಬ್ರಹ್ಮವಿದ್ಯೆ. ಬ್ರಹ್ಮವಿದ್ಯೆಯಿಂದಲೇ ಈ ಭಾರತ ದೇಶ ಉತ್ತಮ ಸ್ಥಾನವನ್ನು ಪಡೆದಿದೆ. ಭಾರತೀಯನ ಮುಖ್ಯ ವಿದ್ಯೆಯೇ ಬ್ರಹ್ಮವಿದ್ಯಾ. ಇದು ನಿತ್ಯ ಶಾಂತಿ ಸುಖವನ್ನು ಕೊಡುವ ವಿದ್ಯೆ.

**ವಿದ್ವಾನ್ ಸರ್ವಾನ್ ನೃಣಾಂ ಸಾಕ್ಷಾತ್ ಸಂಸಾರಸ್ಯ ಪ್ರವರ್ತಕಾಃ ।**

**ಬ್ರಹ್ಮ ವಿದ್ಯಾತು, ಸಂಸಾರತಮಸಃ ಪರಿಘಾತಿನಿ ॥**

ಎಲ್ಲಾ ವಿದ್ಯೆಗಳು ಮನುಷ್ಯನನ್ನು ಕೇವಲ ಮೃತ್ಯು ಸಂಸಾರದ ಕಡೆಗೆ ದಬ್ಬುವ ವಿದ್ಯೆಗಳಾಗಿವೆ. ಆದರೆ ಬ್ರಹ್ಮವಿದ್ಯೆಯಾದರೋ ಸಂಸಾರವೆಂಬ ಅಜ್ಞಾನವನ್ನು ನಾಶ ಮಾಡುವುದೇ ಆಗಿದೆ. ಅದೇ ಅಧ್ಯಾತ್ಮ ವಿದ್ಯೆ. ಅದೇ ಬ್ರಹ್ಮ ವಿದ್ಯೆ. ಇದೇ ಭಾರತ ದೇಶವು ಜಗತ್ತಿಗೆ ಕೊಡುವ ಕೊಡುಗೆ. ಅದನ್ನು ಗೀತೆಯಲ್ಲಿ **"ಅಧ್ಯಾತ್ಮವಿದ್ಯಾ ವಿದ್ಯಾನಾಂ"** ವಿದ್ಯೆಗಳಲ್ಲಿ ಅಧ್ಯಾತ್ಮ ವಿದ್ಯೆಯೇ ನಾನು ಎಂದಿದ್ದಾನೆ. ಭಗವಂತ. **"ಯಾ ಅವಿದ್ಯಯಾ ನಾಶ ಸ ವಿದ್ಯಯಾ"** ಯಾವುದು ತಪ್ಪು ತಿಳುವಳಿಕೆಗೆ ಎಂಬ ಅವಿದ್ಯೆಯನ್ನು ನಾಶ ಮಾಡುತ್ತದೆಯೋ ಅದೇ ವಿದ್ಯಾ. **"ತದ್ವಿವೇಕೇನ ಚ ವಸ್ತು ಸ್ವರೂಪ ಅವಧಾರಣಂ ವಿದ್ಯಮಾಹುಃ"** ಯಾವುದು ವಿವೇಕದಿಂದ ಪರಮಾತ್ಮನ ಸ್ವರೂಪವನ್ನು ಗೊತ್ತು ಮಾಡಿಕೊಡುತ್ತದೆಯೋ ಅದೇ ವಿದ್ಯೆಯೆಂದು ಕರೆಸಿಕೊಳ್ಳುತ್ತದೆ. ಅದೇ ಉಪನಿಷತ್ ವಿದ್ಯೆ. ಅದೇ ಬ್ರಹ್ಮ ವಿದ್ಯೆ – ಆತ್ಮ ವಿದ್ಯೆ.

ಯಾವುದು ದೇಶಗತ, ಕಾಲಗತ, ವಸ್ತುಗತ ಪರಿಚ್ಛಿನ್ನವಾಗಿರುವುದೋ ಅದು ಪರಿಚ್ಛಿನ್ನ ವಸ್ತು. ಒಂದು ಘಟ ಇಲ್ಲಿದೆ, ಅಲ್ಲಿಲ್ಲ – ಒಂದು ದೇಶದಲ್ಲಿದ್ದು ಮತ್ತೊಂದು ದೇಶದಲ್ಲಿ ಇಲ್ಲದೆ ಇರುವುದಕ್ಕೆ ದೇಶಗತ ಪರಿಚ್ಛಿನ್ನ ಎನ್ನುತ್ತೇವೆ. ಯಾವುದು ಒಂದು ಕಾಲದಲ್ಲಿದ್ದು ಮತ್ತೊಂದು ಕಾಲದಲ್ಲಿಲ್ಲವೋ ಅದಕ್ಕೆ ಕಾಲಗತ ಪರಿಚ್ಛಿನ್ನ ಎನ್ನುತ್ತೇವೆ. ಈ ದೇಹ ಹಿಂದೆ ಇರಲಿಲ್ಲ ; ಈಗ ಇದೆ. ಮುಂದೆ ಇನ್ನು ಕೆಲವು ದಿವಸಗಳ ನಂತರ ಇರುವುದಿಲ್ಲ. ಇದಕ್ಕೆ ಕಾಲಗತ ಪರಿಚ್ಛಿನ್ನತೆಯಿದೆ ಎಂದೇ ತಿಳಿಯಬೇಕು. ಒಂದು ವಸ್ತುವಿನಂತೆ ಮತ್ತೊಂದು ವಸ್ತುವಿಲ್ಲ. ಗಡಿಗೆಯಂತೆ ಪುಸ್ತಕವಿಲ್ಲ ; ಪುಸ್ತಕ ಇದ್ದಂತೆ ಪೆನ್ನಿಲ್ಲ. ಆದ್ದರಿಂದ ಈ ಗಡಿಗೆ ಪುಸ್ತಕಗಳಿಗೆ ವಸ್ತುಗತ ಪರಿಚ್ಛಿನ್ನತೆಯಿದೆ. ಹೀಗೆ ಪ್ರಪಂಚದ ಸರ್ವಪದಾರ್ಥಗಳಿಗೂ ದೇಶಗತ, ಕಾಲಗತ, ವಸ್ತುಗತ ಪರಿಚ್ಛಿನ್ನತೆಯಿದೆ.

---

**"ದುರ್ಲಭಂ ತ್ರಯಮೋ ವೈತದ್ದೈ ವಾನುಗ್ರಹ. ಹೇತುಕಮ್। ಮನುಷ್ಯತ್ವಂ ಮುಮುಕ್ಷತ್ವಂ ಮಹಾಪುರುಷ ಸಂಶ್ರಯಃ"** –ಭಗವಂತನ ಅನುಗ್ರಹಕ್ಕೆ ಕಾರಣೀಭೂತವಾದ ಈ ಮೂರು ಕಷ್ಟಸಾಧ್ಯವೇ ಮನುಷ್ಯ– ಜನ್ಮ, ಮೋಕ್ಷವನ್ನು ಪಡೆಯಬೇಕೆಂಬ ಇಚ್ಛೆ ಮತ್ತು ಮಹಾತ್ಮರ ಸಂಗ (ವಿವೇಕ ಚೂಡಾಮಣಿ)



ಆದ್ದರಿಂದ ಈ ಸರ್ವ ಪ್ರಪಂಚವು ಪರಿಚ್ಛಿನ್ನವಸ್ತು. ತುಂಡು ತುಂಡಾಗಿವೆ. ಆದರೆ ಬ್ರಹ್ಮವೋ ಅಪರಿಚ್ಛಿನ್ನ ವಸ್ತು. ಆ ಬ್ರಹ್ಮವನ್ನು ಯಾವುದು ಉಪಲಕ್ಷಿತ ಮಾಡಿ ಹೇಳುತ್ತದೆಯೋ ಅದೇ ಬ್ರಹ್ಮವಿದ್ಯೆ ಎಂದರೂ. ಬ್ರಹ್ಮವಿದ್ಯೆ ಎಂದರೂ, ಅತ್ಮ ವಿದ್ಯೆ ಎಂದರೂ ಉಪನಿಷತ್ತೆಂದರೂ ಒಂದೆ. ಇಂತಹ ಉಪನಿಷತ್ತುಗಳು ಸಾವಿರಾರು ಇದ್ದರೂ ಆಚಾರ್ಯರು ತಮ್ಮ ಮತವನ್ನು ಪ್ರಮಾಣಿಕರಿಸಲು ಕೇವಲ ಹತ್ತು ಉಪನಿಷತ್ತುಗಳನ್ನೇ ಆರಿಸಿಕೊಂಡಿದ್ದಾರೆ. ಈಶ, ಕೇನ, ಕಠ, ಮುಂಡಕ ಪ್ರಶ್ನೆ – ಮಾಡೂಕ್ಯ, ತೈತ್ತಿರೀಯ, ಐತರೀಯ, ಛಾಂದೋಗ್ಯ ಮತ್ತು ಬೃಹದಾರಣ್ಯ ; ಈ ಹತ್ತು ಉಪನಿಷತ್ತಿನಲ್ಲಿ ಕೈವಲ್ಯ ಉಪನಿಷತ್ ಸೇರಿರುವುದಿಲ್ಲ. ಆದ್ದರಿಂದ ಇದು ಕೀಳಾದುದೆಂದು ಭಾವಿಸಬಾರದು. ಆದರೂ ಈ ಕೈವಲ್ಯೋಪನಿಷತ್ತು ಕೇವಲ ಕೈವಲ್ಯವನ್ನೇ ಪ್ರತಿಪಾದಿಸುವುದರಿಂದ ಇದನ್ನು ನಾವು ವಿಚಾರ ಮಾಡಬೇಕು.

ಪಾಶ್ಚಿಮಾತ್ಯ ದೇಶಗಳಲ್ಲಿ ಈ ಉಪನಿಷತ್ತುಗಳಿಗೆ ಬಹಳ ಬೆಲೆಯಿದೆ. ಮೊಗಲ್ ಚಕ್ರವರ್ತಿಯಾದ ದಾರಶೂಕನು ಉಪನಿಷತ್ತುಗಳನ್ನು ಶ್ರವಣ ಮಾಡುತ್ತಿದ್ದನು. ಹೀಗೆ ಶ್ರವಣ ಮಾಡಿ 65 ಉಪನಿಷತ್ತುಗಳನ್ನು ಉರ್ದು ಭಾಷೆಗೆ ಪರಿವರ್ತನೆ ಮಾಡಿಸಿಕೊಂಡು ಓದುತ್ತಿದ್ದನು. ಉರ್ದು ಭಾಷೆಯಿಂದ ಆ ಉಪನಿಷತ್ತುಗಳು ಅರಬ್ಬೀ ಭಾಷೆಗೂ ತರ್ಜುಮೆಯಾದವು. ಅರಬ್ಬೀ ಭಾಷೆಯಿಂದ ಲ್ಯಾಟಿನ್ ಭಾಷೆಗೂ ತರ್ಜುಮೆಯಾಗಿ ಅದು ತನ್ನ ಮೂಲ ತತ್ವವನ್ನು ಕಳೆದುಕೊಂಡಿತು. ಆಗ ಮಾಕ್ಸ್‌ಮಲ್ಲರ್‌ನು ಭಾರತ ದೇಶಕ್ಕೆ ಬಂದು ಸಂಸ್ಕೃತದ ಮೂಲ ಭಾಷೆಯಿಂದಲೇ ಉಪನಿಷತ್ ಅಧ್ಯಯನ ಮಾಡಿದ. ಆಗ ಪ್ರಪಂಚದಲ್ಲಿ ಯಾರು ತನ್ನ ಸ್ವರೂಪವನ್ನು ಸಾಕ್ಷಾತ್ಕಾರ ಮಾಡಿಕೊಂಡಿದ್ದಾರೆಂದರೆ ಅದು ಉಪನಿಷತ್ತುಗಳಿಂದಲೇ ಎಂದು ಬರೆದಿದ್ದಾರೆ. ಮುಂದಿನ ಜನ್ಮ ನನಗೆ ಇರುವುದಾದರೆ ನಾನು ಭಾರತ ದೇಶದಲ್ಲಿ ಯಾರು ಉಪನಿಷತ್ತನ್ನು ಅಧ್ಯಯನ ಮಾಡಿ ಆತ್ಮ ಸ್ವರೂಪವನ್ನು ತಿಳಿದಿದ್ದಾರೋ ಅಂತಹ ಬ್ರಾಹ್ಮಣರ ಮನೆಯಲ್ಲೇ ಹುಟ್ಟುತ್ತೇನೆ. ಹಾಗೆ ಹುಟ್ಟಿಸುವಂತೆ ಪರಮಾತ್ಮನನ್ನು ಬೇಡುತ್ತೇನೆ ಎಂದು ಹೇಳಿದ್ದಾರೆ.

ಜರ್ಮನ್ನಿನ ಶೋಪನ್ಹೇರ್ ಅವರ ಮಾತನ್ನು ಕೇಳಿ –

In the whole world there is no study so benificient and so elevating as that is the Upanishats so has been the solace of my life and it will be the solace of my death.

ಹೀಗೆ ಇನ್ನೂ ಅನೇಕ ಜನ ಪಾಶ್ಚಿಮಾತ್ಯ ತತ್ವಜ್ಞಾನಿಗಳು ಉಪನಿಷತ್ತುಗಳ ಬಗ್ಗೆ ಅಗಾಧವಾಗಿ ಹೊಗಳಿದ್ದಾರೆ. ಆದ್ದರಿಂದ ಉಪನಿಷತ್ತಿನ ತಿಳುವಳಿಕೆ ಬಹಳ ಮುಖ್ಯವಾದುದು ; ಅಗಾಧವಾದುದು.

---

**"ಕಿಂ ತೇನ ಅಶ್ರುತ ಪಾಪಂ ಚೌರೇಣಾತ್ಮಾಪ ಹಾರಿಣಃ"** –ಯಾವನು ತಾನು ಆತ್ಮನಾಗಿದ್ದರೂ, ತಾನು ಆತ್ಮನೆಂದು ತಿಳಯದೆ ಹೋದರೆ ಅವನು ಎಲ್ಲಾ ಪಾಪವನ್ನು ಮಾಡಿದಂತೆಯೂ, ಆತ್ಮನನ್ನು ಕಳ್ಳತನ ಮಾಡಿದಂತೆ ಆಗುವುದು (ಅಭಿಜ್ಞಾನ ಶಾಕುಂತಲೆ)

## ಇನ್ನು ಕೈವಲ್ಯೋಪನಿಷತ್

ಈ ಉಪನಿಷತ್ತು ದಶೋಪನಿಷತ್ತಿನಲ್ಲಿ ಸೇರಿಲ್ಲವೆಂದಾಕ್ಷಣ ಇದಕ್ಕೆ ಬೆಲೆ ಕಡಿಮೆ ಎಂದು ಅರ್ಥವಲ್ಲ. ಇದು 11ನೇ ಉಪನಿಷತ್ತು. ಶೈವ ಮತದವರು ಶಿವನೇ ಪರಮಾತ್ಮನೆಂದು ತೋರಿಸುವುದಕ್ಕಾಗಿ ಮತ್ತು ಶೈವ ಮತವು ವೈದೀಕ ಸಂಬಂಧವಾದುದೆಂದು ತೋರಿಸಲು, ಶೈವ ಮತವು ಪ್ರಮಾಣವೆಂದು ತೋರಿಸಲು ಈ ಕೈವಲ್ಯೋಪನಿಷತ್ತನ್ನು ಆರಿಸಿಕೊಂಡಿದ್ದಾರೆ.

## ಕೈವಲ್ಯೋಪನಿಷತ್ತಿನ ಸ್ಥಾನ

ಕೈವಲ್ಯೋಪನಿಷತ್ ಅಥರ್ವಣ ಉಪನಿಷತ್ತಿಗೆ ಸೇರಿದ ಉಪನಿಷತ್ ; ಇದು ಗುರುಶಿಷ್ಯ ಸಂವಾದದಿಂದ ಕೂಡಿದ ಉಪನಿಷತ್ತು. ಈ ಉಪನಿಷತ್ ಅನುಬಂಧ ಚತುಷ್ಟಯಗಳಿಂದ ಕೂಡಿದೆ.

**1) ಅಧಿಕಾರಿ :** ಇದಕ್ಕೆ ಅಧಿಕಾರಿ ಯಾರು? ಅನೇಕ ವೇದ ಮಂತ್ರಗಳನ್ನು ರಚಿಸಿ ವೇದಗಳಲ್ಲಿ ಸೇರಿಸಿರುವ ಅಶ್ವಲಾಯನ ಮಹರ್ಷಿಯೇ, ಪ್ರಶ್ನಕರ್ತ.

ವಿಷಯವು ಪ್ರಶ್ನೆ ಕೇಳುವವನ ಮೇಲೆ ಅವಲಂಬಿಸಿರುತ್ತದೆ. ಈ ಅಶ್ವಲಾಯನನು ಸದಾಚಾರ ಸಂಪನ್ನನು – ಗುರು ಪುತ್ರ, ಇಂತಹ ಮಹಾತ್ಮನೇ ಶಿಷ್ಯ. ಈ ರೀತಿ ವೇದ ಮಂತ್ರಗಳನ್ನು ರಚಿಸಿ ವೇದದಲ್ಲಿ ಸೇರಿಸುವ ಶಿಷ್ಯನೇ ಪ್ರಶ್ನೆ ಕರ್ತನೆಂದು ಹೇಳಿರುವುದರಿಂದ ಇದರ ಯೋಗ್ಯತೆ ಎಷ್ಟಿರಬಹುದು! ಇದರಲ್ಲಿ ಎಂತಹ ಮಹತ್ತಾದ ತತ್ವ ಅಡಕವಾಗಿರಬಹುದು! ಯೋಚಿಸಿರಿ.

**ಗುರು ಯಾರು**? ಇನ್ನು ಕೈವಲ್ಯೋಪನಿಷತ್ತಿನ ಬೋಧನ ಗುರು ಚತುರ್ಮುಖ ಬ್ರಹ್ಮ. ಯಾರಿಗೆ ಜಗದಾದಿಯಲ್ಲಿ ಪರಬ್ರಹ್ಮದಿಂದ ಮೊದಲು ವೇದದ ಉಪದೇಶವಾಯಿತೋ ಅಂತಹ ಆದಿ ಗುರುವಾದ ಚರ್ತುರ್ಮುಖ ಬ್ರಹ್ಮನೇ ಬೋಧಿಸಿದ ಗುರು. ಪರಬ್ರಹ್ಮದಿಂದ ಬೋಧಿಸಲ್ಪಟ್ಟ ಪರಮಾತ್ಮ ತತ್ವವನ್ನು ತಾನು ತಿಳಿದು ಜೀರ್ಣ ಮಾಡಿಕೊಂಡು ಅನುಭವಿಸಿ, ಆಚರಿಸಿ ತಾನೇ ಪರಬ್ರಹ್ಮನೆಂದು ಅನುಭವಿಸಿದ ಮತ್ತು ಮತ್ತೊಬ್ಬರಿಗೆ ಬೋಧಿಸಲು ಸಮರ್ಥನಾದ ಚತುರ್ಮುಖ ಬ್ರಹ್ಮನೇ ಗುರು.

**2) ವಿಷಯವೇನು**? : 'ಬ್ರಹ್ಮವನ್ನು ತಿಳಿದವನು ಬ್ರಹ್ಮನೇ ಆಗುತ್ತಾನೆ.' **'ಬ್ರಹ್ಮವಿತ್ ಬ್ರಹ್ಮೈವ ಭವತಿ'**. ಆ ರೀತಿ ಚತುರ್ಮುಖ ಬ್ರಹ್ಮನು ಆದಿ ಗುರುವು ಅಶ್ವಲಾಯನನಿಗೆ ನೀನೇ ಬ್ರಹ್ಮವೆಂದು ಹೇಳಿದ್ದಾನೆ.

ನೀನು ಬ್ರಹ್ಮವೆಂದು ಹೇಳಿರಬೇಕಾದರೆ ಅದು ಅಪರೋಕ್ಷವಾಗಿರಬೇಕು, ಜೀವ ಭಾವ ಹೋಗಿರಬೇಕು. ಸ್ವಪ್ನದಲ್ಲಿ ಹುಲಿ ಹಿಡಿದವನಿಗೆ ಗಡಬಡ ಒದ್ದಾಡುವವನಿಗೆ ಹುಲಿಯಿಂದ ಬಿಡಿಸಬೇಕಾದರೆ ಏನು ಮಾಡಬೇಕು? ಬಂದೂಕು ತೆಗೆದುಕೊಂಡು ಹೊಡೆಯಬೇಕೆ? ಅಥವಾ ಜಪಸರ ಹಿಡಿದು ಜಪ ಮಾಡಬೇಕೆ?

ಇಲ್ಲ. ಯೋಗ ಮಾಡಬೇಕೆ? ಸಮಾಧಿ ಏರಿಸಬೇಕೆ? ಯಾವುದೂ ಬೇಕಾಗಿಲ್ಲ.

---

**''ಸರ್ವ ಸಂಕಲ್ಪ ಸಂನ್ಯಾಸೀ ಯೋಗಾರೂಢ ಸ್ತದೋಚ್ಯತೇ''**
ಯಾರು ಸರ್ವಸಂಕಲ್ಪ(ಕಾಮನೆ)ಗಳನ್ನು ತ್ಯಜಿಸಿದವನನ್ನು
ಯೋಗಾರೂಢನೆಂದು ಕರೆಯುತ್ತಾರೆ (ಗೀತೆ 6–4)



ಸ್ವಪ್ನದಿಂದ ಎಬ್ಬಿಸಿದರೆ ಸಾಕು ; ಆಗ ಹುಲಿಯೂ ಇಲ್ಲ. ಕಡಿಯುವುದೂ ಇಲ್ಲ, ಗಾಯ ಇಲ್ಲ, ಔಷಧಿಯಿಲ್ಲ, ಆಸ್ಪತ್ರೆಯಿಲ್ಲ, ಡಾಕ್ಟರ್ ಇಲ್ಲ, ಯಾರೂ ಇಲ್ಲ. ಎಬ್ಬಿಸಿದರೆ ಸಾಕಲ್ಲವೇ? ಹಾಗೆ ಅಜ್ಞಾನ ನಿದ್ದೆಯಿಂದ ಎಬ್ಬಿಸುವುದೇ ಮುಖ್ಯವಾಗಿದೆ ; ಅದೇ ಔಷಧಿ, ಅದೇ ಯುಕ್ತಿ. ನೀನು ಬ್ರಹ್ಮನೆಂದು ಹೇಳುವುದು ವಿಷಯ.

**3) ಸಂಬಂಧ :** ಜಗದಾದಿ ಗುರುವಾದ ಚತುರ್ಮುಖ ಬ್ರಹ್ಮನಿಗೂ ವೇದ ಸೂತ್ರಗಳನ್ನು ರಚಿಸಿ ಪ್ರಖ್ಯಾತಿಯಾದ ಅಶ್ವಲಾಯನ ಋಷಿಗೂ ಬೋಧ್ಯ ಬೋಧಕಭಾವ ಸಂಬಂಧವಿದೆ.

**4) ಪ್ರಯೋಜನವೇನು**? : ಸರ್ವ ದುಃಖಗಳ ಆತ್ಯಾಂತಿಕ ನಿವೃತ್ತಿ ಪರಮಾನಂದ ಪ್ರಾಪ್ತಿಯೇ ಪ್ರಯೋಜನ.

ಈ ರೀತಿ ಈ ಕೈವಲ್ಯೋಪನಿಷತ್ತು ಅನುಬಂಧ ಚತುಷ್ಟಯಗಳನ್ನು ಒಳಗೊಂಡಿದೆ. ಮತ್ತೊಂದು ವಿಷಯ, ಈ ಉಪನಿಷತ್ತು ಯಾವ ವೇದಕ್ಕೆ ಸೇರಿದ್ದು? ಈ ವಿಷಯಗಳಲ್ಲಿ ಎರಡು ಮತಗಳಿವೆ. ಮಹದೇವಶಾಸ್ತ್ರಿಗಳು ಇನ್ನೂ ಅನೇಕ ಮಹಾತ್ಮರು ಇದು ಅಥರ್ವಣ ವೇದಕ್ಕೆ ಸೇರಿದ್ದೆಂದು ಅಭಿಪ್ರಾಯಪಟ್ಟಿದ್ದಾರೆ. ಇನ್ನು ಬಹಳ ಜನ ಮಹಾತ್ಮರು ಈ ಕೈವಲ್ಯೋಪನಿಷತ್ತು ಯಜುರ್ವೇದಕ್ಕೆ ಸೇರಿದ್ದೆಂದೂ ಅಭಿಪ್ರಾಯಪಟ್ಟಿದ್ದಾರೆ.

ಅಥರ್ವಣ ಉಪನಿಷತ್ತಿಗೆ ಸೇರಿದ ಉಪನಿಷತ್ತುಗಳ ಆದಿ ಅಂತ್ಯದಲ್ಲಿ **"ಓಂ ಭದ್ರಂ ಕರ್ಣೇಬಿ' ಶ್ರುಣುಯಾಮದೇವಾ"** ಎಂಬ ಶಾಂತಿ ಮಂತ್ರವು ಹೇಳಲ್ಪಟ್ಟಿದೆ.

ಇನ್ನು ಯಜುರ್ವೇದಕ್ಕೆ ಸಂಬಂಧಪಟ್ಟ ಉಪನಿಷುತ್ತುಗಳಲ್ಲಿ – **"ಓಂ ಸಹನಾವವತು! ಸಹನೌ ಭುನಕ್ತು! ಸಹವೀರ್ಯಂ ಕರವಾವಹೈಃ! ತೇಜಸ್ವಿ ನಾಮಧೀತಮಸ್ತು! ಮಾವಿದ್ ವಿಷಾವಹೈಃ ॥"** ಎಂಬ ಶಾಂತಿ ಮಂತ್ರವು ಹೇಳಲ್ಪಟ್ಟಿದೆ. ಆದರೆ ಈಗ ನಾವು ನೋಡೋಣ – ಈ ಕೈವಲ್ಯೋಪನಿಷತ್ತಿನ ಆದಿ ಅಂತ್ಯದಲ್ಲಿ **"ಓಂ ಸಹನಾವವತು..."** ಈ ಶಾಂತಿ ಮಂತ್ರವು ಹೇಳಲ್ಪಟ್ಟಿದೆ. ಆದ್ದರಿಂದ ಈ ಉಪನಿಷತ್ತು ಯಜುರ್ವೇದಕ್ಕೆ ಸೇರಿದೆಂದು ತಿಳಿದುಬರುತ್ತದೆ. ಆದ್ದರಿಂದ ಮಹದೇವಶಾಸ್ತ್ರಿಗಳು ಹೇಳಿದ ಮಾತು ಶಾಸ್ತ್ರೀಯವಾಗಲಿಲ್ಲ, ಸಮಂಜಸವೂ ಆಗಲಿಲ್ಲ. ಆದ್ದರಿಂದ ಈ ಉಪನಿಷತ್ತು ಯಜುರ್ವೇದಕ್ಕೆ ಸೇರಿದ್ದೆಂದು ತಿಳಿದು ಬಂತು. ಇನ್ನು ಕೆಲವು ಜನ ಮಹಾತ್ಮರು ಅಥರ್ವಣ ವೇದದ ಉಪನಿಷತ್ತುಗಳಿಗೆ ಹೇಳುವ ಶಾಂತಿ ಮಂತ್ರ **"ಓಂ ಭದ್ರಂ ಕರ್ಣೇಭಿಃ ಶ್ರುಣುಯಾಮದೇವಾಃ"** ಎಂಬ ಮಂತ್ರವನ್ನು ಹಾಕಿ ಇದು ಅಥರ್ವಣ ವೇದಕ್ಕೆ ಸೇರಿದ್ದೆಂದು ಹೇಳಿದ್ದಾರೆ.

ಇದು ಯಾವ ವೇದಕ್ಕಾಗಲೀ ಸೇರಿರಲು ಅದರ ವಿಮರ್ಶೆ ನಮಗೆ ಬೇಕಾಗಿಲ್ಲ.

---

**''ಆಚಾರ್ಯ ದೈವ ವಿದ್ಯಾ ವಿದಿತಾ ಸಾಧಿಷ್ಟಂ ಪ್ರಾಪ್ತಯತಿ''**
ಶ್ರೀ ಗುರುಗಳಂದ ಕಲಿತಂತಹ ವಿದ್ಯೆಯು ಮುಕ್ತಿಯನ್ನೇ ಕೊಡುತ್ತದೆ
(ಛಂದೋಗ್ಯ ಉ.)

ಅಂತು ಇದು ವೇದ ಮಂತ್ರಗಳೇ ಆಗಿವೆ ; ನಮಗೆ ಅಷ್ಟು ಮಾತ್ರ ಬೇಕು. ಇದು ಲಘು ಉಪನಿಷತ್ತುಗಳಲ್ಲಿ ಅಗ್ರಗಣ್ಯ ಸ್ಥಾನವನ್ನು ಪಡೆದಿದೆ. ಇದರ ಮೋಹಕ ಛಂದಸ್ಸು, ಕವಿತಾ ಮಾಧುರ್ಯ, ಕ್ರಮ ಬದ್ಧವಾದ ಸರಣಿ, ಆತ್ಮಾನುಭವದ ವಿಶ್ಲೇಷಣೆ, ತತ್ವದ ನಿಲುವು ಇವೆಲ್ಲವುಗಳೂ ಸೇರಿ ಈ ಉಪನಿಷತ್ತನ್ನು ಬಹಳ ಆಕರ್ಷಣೀಯವಾಗಿಯೂ ಮೋಹಕ-ವಾಗಿಯೂ, ಮನೋಹರವಾಗಿಯೂ ಮಾಡಿವೆ.

ಈ ಉಪನಿಷತ್ತಿನಲ್ಲಿ ಪ್ರಾಚೀನ ಸಂಪ್ರದಾಯದಂತೆ, ವೇದ ಸಂಪ್ರದಾಯದಂತೆ ಶಿಷ್ಯನೊಬ್ಬ ಆತ್ಮಜ್ಞಾನವನ್ನು ಪಡೆದು ಮನುಷ್ಯ ಜನ್ಮವನ್ನು ಸಾರ್ಥಕ ಮಾಡಿಕೊಳ್ಳುವುದಕ್ಕಾಗಿ ಗುರುವನ್ನು ಹುಡುಕಿಕೊಂಡು ಬರುತ್ತಾನೆ. ಅಂತಹ ಶಿಷ್ಯ? ಮಹಾತಪಸ್ವಿ ; ಗುರುವೋ ಸೃಷ್ಟಿಕರ್ತನಾದ ಸ್ವತಃ ಬ್ರಹ್ಮ. ಇದರಿಂದ ಇದರ ಮಹತ್ವ ಕಂಡು ಬರುತ್ತದೆ. ಈ ಉಪನಿಷತ್ತಿನಲ್ಲಿ ಬರೀ ಬೋಧ ಮಾಡುವ ಅಸ್ಪಷ್ಟತೆಯಿಲ್ಲ. ಸರಳವಾದ ಶಿಷ್ಯನ ಪ್ರಶ್ನೆಗೆ ನೇರವಾದ ಉತ್ತರವನ್ನು ಗುರುವು ಕೊಡುತ್ತಾನೆ. ಅಧಿಕಾರಿಯಾದ ಶಿಷ್ಯ ಅಶ್ವಲಾಯನನಿಗೆ ಆತ್ಮ ಸಾಕ್ಷಾತ್ಕಾರದ ಸ್ಪಷ್ಟವಾದ ಚಿತ್ರವನ್ನು ಕೇವಲ ಕೆಲವೇ ಕೆಲವು ಮಾತುಗಳಲ್ಲಿ ಅತ್ಯಂತ ಸುಂದರವಾಗಿ ಹೇಳಿದ್ದರಿಂದ ಈ ಉಪನಿಷತ್ತು ಚಿಕ್ಕದಾಗಿದೆಯೇ ವಿನಹ ವಿಷಯಗಳೇನು ಕಡಿಮೆಯಿಲ್ಲ.

### ಉಪನಿಷತ್ ಎಂದರೇನು?

ಉಪನಿಷತ್ ಪದ ಒಂದು ಸಂಯುಕ್ತ ಪದ. ಉಪ + ನಿ + ಸದ್. ಈ ಮೂರು ಪದಗಳು ಅಚ್ಚುಕಟ್ಟಾಗಿ ಒಂದು ಕಡೆ ಸೇರಿ ಉಪನಿಷತ್ ಎಂಬ ಸಂಯುಕ್ತ ಪದ ಏರ್ಪಟ್ಟಿದೆ. ಉಪ ಸಮೀಪ. ಯಾರ ಸಮೀಪ? ರೋಗ ಬಂದರೆ ಯಾರ ಸಮೀಪ ಹೋಗುತ್ತೀರಿ? ಡಾಕ್ಟರ್ ಸಮೀಪ ಹೋಗುತ್ತೇವೆ. ಹಾಗೆ ಅಜ್ಞಾನ ನಿವಾರಣೆ ಮಾಡಿ-ಕೊಳ್ಳಬೇಕಾದರೆ ಅಜ್ಞಾನ ನಿವಾರಣೆಯಾಗಿರುವ ಜ್ಞಾನಿಯ ಸಮೀಪಕ್ಕೆ ಹೋಗಬೇಕಲ್ಲವೆ! ಯಾರು ಅಜ್ಞಾನ ನಿವಾರಣೆ ಮಾಡಿಕೊಂಡಿರುವನು? ಹಾಗೆ ಅಜ್ಞಾನ ನಿವೃತ್ತಿ ಮಾಡಿಕೊಂಡು ನಾನೇ ಬ್ರಹ್ಮನೆಂಬ ಬ್ರಾಹ್ಮೀ ಸ್ಥಿತಿ ಪಡೆದವನ ಹತ್ತಿರ ಅಂದರೆ ಸಮೀಪ ಹೋಗಬೇಕು, ಇದೇ **"ಉಪ"** ಎಂಬ ಪದಕ್ಕೆ ಅರ್ಥ.

ಇನ್ನು **"ನಿ"** ಇದು ಎರಡನೆ ಪದ **"ನಿ"** ಎಂದರೆ ನಿಷ್ಠೆಯಿಂದ ಕುಳಿತುಕೊಳ್ಳಬೇಕು. ಅಂದರೆ ಇದಕ್ಕೆ ಶ್ರದ್ಧೆ ಎಂದು ಹೇಳುತ್ತಾರೆ. ಆ ತತ್ವಜ್ಞಾನಿಯ ಮುಂದೆ ನಿಷ್ಠೆಯಿಂದ ಎಂದರೆ ಶ್ರದ್ಧೆಯಿಂದ ಕುಳಿತುಕೊಳ್ಳಬೇಕು. ತತ್ವಜ್ಞಾನಿಯಾದರೋ **ಮಾನಾಪ ಮಾನಯೋಃ ತುಲ್ಯಾ;** ಅವನಿಗೆ ಮಾನವೂ ಇಲ್ಲ ಅವಮಾನವೂ ಇಲ್ಲ ಇದನ್ನು ಗೀತೆಯು **"ನಿರ್ಮಾನ ಮೋಹ"** (15-5) ಎಂದು **"ಅಮಾನಿತ್ವಮ್" (13-7)** ಯಾವನು ಮಾನವನ್ನೂ ಬಯಸದೆ ಇರುವವನೇ ಶ್ರೀ ಗುರು. ಇವನು ದುಃಖವನ್ನು ಸಹಿಸಿದವನಾದ ತಿತಿಕ್ಷುವಾಗಿರುತ್ತಾನೆ. ಏಕೆಂದರೆ ಯಾವ ವಸ್ತು ಪ್ರತ್ಯಕ್ಷವಾಗಿಲ್ಲವೋ,

---

**"ಚಿತ್ತಸ್ಯ ಶುದ್ಧಯೇ ಕರ್ಮ ನತು ವಸ್ತೂಪಲಬ್ಧಯೇ ಸ್ತು ಸಿದ್ಧಿರ್ವಿಚಾರೇಣ ನ ಕಿಮಚಿತ್ ಕರ್ಮಕೋಟಿಭಿಃ"**
ಕರ್ಮವು ಚಿತ್ತಶುದ್ಧಿಗಾಗಿ ಮಾತ್ರ ಇದೆ. ಆದರೆ ಪರಬ್ರಹ್ಮನ ಸಾಕ್ಷಾತ್ಕಾರ ಹೊಂದುವುದಕ್ಕೆ ಅಲ್ಲ. ಪರಬ್ರಹ್ಮನ ಸಾಕ್ಷಾತ್ಕಾರವು ವಿಚಾರದಿಂದ ಮಾತ್ರ ಉಂಟಾಗುವುದೆ ವಿನಃ, ಕೋಟಿ ಕರ್ಮಗಳಿಂದಲೂ ಆಗುವುದಿಲ್ಲ
(ವಿವೇಕ ಚೂಡಾಮಣಿ)



ಅದು ಜಾಗ್ರತ್ ಸ್ವಪ್ನದಲ್ಲಿ ಸಮಾನವಾಗಿದ್ದು ಅಪರೋಕ್ಷವಾಗಿರುತ್ತದೆಯೋ ಅಂತಹ ವಸ್ತುವನ್ನು ಪಡೆದು ಕೊಳ್ಳಬೇಕಾದರೆ ಜಿಜ್ಞಾಸುವಿಗೆ ಶ್ರದ್ಧೆ ವಿನಃ ಮತ್ತೇನೂ ಬೇಕಾಗುವುದಿಲ್ಲ. ಆದ್ದರಿಂದ **"ನಿ"** ಎಂದರೆ ಶ್ರದ್ಧಾವಂತನಾಗಿರಬೇಕೆಂದು ಅರ್ಥ. ಅದ್ವೈತ ಸಿದ್ಧಿಯಲ್ಲಿ ಶ್ರೀ ಮಧುಸೂದನ ಸರಸ್ವತಿಗಳವರು ಶ್ರದ್ಧೆಯು ಅದು ನಮ್ಮ **"ಧನ"** ಎಂದು ಹೇಳಿದ್ದಾರೆ. **"ಶ್ರದ್ಧಾಧನೇನ ಮುನಿನಾಮಪಿ...."** ಎಂದಿದ್ದಾರೆ. ಇನ್ನು ಖಂಡನ - ಖಂಡ ಖಾದ್ಯದಲ್ಲಿ ಶ್ರೀಹರ್ಷನು ಹೀಗೆ ಹೇಳುತ್ತಾನೆ. **"ಶ್ರದ್ಧೆಯು ಬಹಳ ದೊಡ್ಡ ಪಂಡಿತನನ್ನಾಗಿ ಮಾಡುತ್ತದೆ. ಆದ್ದರಿಂದ ಶ್ರದ್ಧೆಯಿಂದ ಶ್ರೀಗುರುವಿನ ಆರಾಧನೆ ಮಾಡು"** ಎಂದಿದ್ದಾರೆ. ಯಾರು ಶ್ರದ್ಧೆಯಿಂದ ಶ್ರೀಗುರುವಿನ ಆರಾಧನೆ ಮಾಡುತ್ತಾನೋ ಅವನಿಗೆ ಈಶ್ವರ ಜ್ಞಾನ ದೊರೆಯುತ್ತದೆ. ಶ್ರದ್ಧಾವಿತ್ತೋ ಭೂತ್ವಾ, ಶ್ರದ್ಧತ್ವ, ತಾತಾ, ಶ್ರದ್ಧಾವಂತನಾಗು ಶ್ರದ್ಧೆಯು ಶಕ್ತಿಯನ್ನು ದಯಪಾಲಿಸುತ್ತದೆ. ಹಾಗಾದರೆ ಶ್ರದ್ಧೆ ಹೇಗಿರುತ್ತದೆ? ಶ್ರದ್ಧೆ ಎಂದರೆ ಶಾಸ್ತ್ರ ಮತ್ತು ಗುರುವಿನಲ್ಲಿ ತತ್ತ್ವಶಾಸ್ತ್ರದ ಬುದ್ಧಿ. ಒಂದು ವೇಳೆ ಶಾಸ್ತ್ರದಲ್ಲಿ ದೋಷವು ಕಂಡು ಬಂದರೆ ಅದನ್ನು ತನ್ನ ಬುದ್ಧಿಯ ದೋಷವೆಂದೂ ನೋಡಬೇಕು.

ಮೂರು ಸಾರಿ **ಶಾಂತಿಃ**ಯನ್ನು ಉಚ್ಚಾರ ಮಾಡಲು ಕಾರಣವೇನು? ಮತ್ತು ಕೊನೆಯಲ್ಲಿ ಗುರು-ಶಿಷ್ಯರೂ ಒಟ್ಟಿಗೆ ಸೇರಿ ಈ ಶಾಂತಿ ಮಂತ್ರವನ್ನು ಪಠಿಸಬೇಕು. ಪಠಿಸಿದ ನಂತರವೇ ಪಾಠ ಪ್ರಾರಂಭಿಸಬೇಕು. ಇದು ನಿತ್ಯ ವಿಧಿ. ಇದು ಏಕೆ?

ನಮಗೆ ಶಾಸ್ತ್ರಗಳ ಅಧ್ಯಯದಲ್ಲಿ ಅನೇಕ ಅಡಚಣೆಗಳು ಉಂಟಾಗುತ್ತವೆ. **ಶ್ರೇಯಾಂಸಿ ಬಹು ವಿಘ್ನಾನಿ** ಬೋಧಾ ಕಾಲದಲ್ಲಿ ಹೊರಗೆ ಶಬ್ದವಾಗುತ್ತದೆ. ಅಂತಃಕರಣ ಆ ಕಡೆ ಹೋಗುತ್ತವೆ. ಈ ವಿಘ್ನಗಳು ನಮ್ಮ ಅಂತಃಕರಣಗಳನ್ನು ಇಂದ್ರಿಯಗಳನ್ನು ಚಂಚಲ ಮಾಡುತ್ತವೆ. ಬೋಧ ಮಾಡುವಾಗ ಇಂದ್ರಿಯ ಅಂತಃಕರಣವು ನಿಶ್ಚಲವಾಗಿಯೂ, ಅಚಲವಾಗಿಯೂ ಇರಬೇಕಲ್ಲವೆ! ಗ್ರಹಿಸುವ ಬುದ್ಧಿಯು ಸಮಾಧಿಯಿಂದ ಇರಬೇಕಲ್ಲವೆ. ಹಾಗೆ ಬುದ್ಧಿಯು ನಿಶ್ಚಲವಾಗಿಯೂ ಸಮಾಧಾನವಾಗಿಯೂ, ಅಚಲವಾಗಿಯೂ ಇರುವಂತೆ ಮಾಡುವವರು ಯಾರು? ದೇವತೆಗಳು. ಶಾಂತಿಯನ್ನು ಕೊಡಲೆಂದು **ಓಂ ಶಾಂತಿಃ** ಎನ್ನುತ್ತೇವೆ. ದೇವತೆಗಳಿಂದಲೇ ಬರಬಹುದಾದ ಅಡಚಣೆಗಳು ನಿವಾರಣೆಯಾಗಲಿ ಎಂದೂ ಅದಕ್ಕೆ ಆಧಿದೈವಿಕ ದುಃಖವು ಶಾಂತಿಯಾಗಲೆಂದೂ, ಎಂದರೆ ನಮ್ಮ ವ್ಯಾಪ್ತಿಗೆ ಮೀರಿದ ಶಕ್ತಿಗಳಿಂದ ಉಂಟಾಗುವ ಗುಡುಗು, ಸಿಡಿಲು ಇತ್ಯಾದಿ ಅಡಚಣೆಗಳು ನಿವಾರಣೆ ಆಗಲೆಂದೂ **ಓಂ ಶಾಂತಿಃ** ಎನ್ನಬೇಕು. ಏಕೆಂದರೆ ನಾವು ಬ್ರಹ್ಮಜ್ಞಾನವನ್ನು ಪಡೆದು ಬ್ರಹ್ಮ ಸ್ವರೂಪವಾಗುವುದು ದೇವತೆಗಳಿಗೆ ಇಚ್ಛೆಯಿಲ್ಲ. ಏಕೆಂದರೆ ನಾವು ಬ್ರಹ್ಮ ಸ್ವರೂಪವಾದರೆ ಆ ದೇವತೆಗಳನ್ನು ಪೂಜಿಸುವವರಾರು? ಮತ್ತು ಬ್ರಹ್ಮ ಸ್ವರೂಪರಾದರೆ ಆ ದೇವತೆಗಳೇ ನಮ್ಮನ್ನು ಪೂಜಿಸಬೇಕು. ಇದು ಅವರಿಗೆ ಇಷ್ಟವಿಲ್ಲ, ಆಳುಕಾಳುಗಳಿಂದ ಪೂಜ್ಯತೆಯನ್ನು ಪಡೆದ ಸಾಹುಕಾರನು ಯಾವ ಆಳೂ ತನಗಿಂತ ಮೇಲಾಗುವುದನ್ನು ಸಹಿಸುವುದಿಲ್ಲ. ಹಾಗೆ ಈ ದೇವತೆಗಳು ನಾವು ಉಪನಿಷತ್ತನ್ನು ಅಧ್ಯಯನ ಮಾಡಿ ಬ್ರಹ್ಮ ಸ್ವರೂಪರಾಗುವುದು ಅವರಿಗೆ ಮುಜುಗರ.

---

**"ಜಾತಸ್ಯ ಹಿ ಧ್ರುವೋ ಮೃತ್ಯುಃ ಧ್ರುವಂ ಜನ್ಮ ಮೃತಸ್ಯಚ"**
ಹುಟ್ಟಿದವನಿಗೆ ಸಾವು ನಿಶ್ಚಯ, ಸತ್ತವನಿಗೆ ಮತ್ತೆ ಹುಟ್ಟುವುದು ನಿಶ್ಚಯ
(ಗೀತೆ 2-23)

ಅದಕ್ಕಾಗಿ ನಮ್ಮ ಉಪನಿಷತ್ತು ಅಧ್ಯಯನಕ್ಕೆ ವಿಘ್ನ ತರುತ್ತಾರೆ. ಆ ಕಾರಣದಿಂದ ಅವರನ್ನು ಪ್ರಾರ್ಥಿಸಿ ನಮ್ಮ ಅಡಚಣೆಗಳನ್ನು ನಿವಾರಣೆ ಮಾಡಿಕೊ ಇದೇ ಆಧಿದೈವಿಕ ದುಃಖ ನಿವಾರಣೆ.

ಇನ್ನು ಆಧಿಭೌತಿಕ – ನಮ್ಮ ಅಧ್ಯಾತ್ಮ ವಿದ್ಯೆಗೆ ಪಂಚಭೂತಗಳು ಸಹಕರಿಸ-ಬೇಕಲ್ಲವೇ! ಹೆಚ್ಚಾಗಿ ಗಾಳಿ ಬೀಸಿದರೆ, ಬೆಂಕಿ ಹತ್ತಿದರೆ, ರೌಡಿಗಳು ಗಲಾಟೆ ಮಾಡಿದರೆ ಪ್ರಚಂಡ ಪ್ರವಾಹ ; ಭೂಕಂಪ ಪ್ರಕೃತಿ ವಿಕೋಪ ಇತ್ಯಾದಿಗಳಾದರೆ ನಮ್ಮ ಉಪನಿಷತ್ತು ಅಧ್ಯಯನ ಕುಂಟಿತವಾಗುತ್ತದೆ. ಆದ್ದರಿಂದ ಅಂತಹ ತರದ ದುಃಖಗಳು ನಿವಾರಣೆ ಆಗಲೆಂದೂ **ಓಂ ಶಾಂತಿಃ** ಆಧಿಭೌತಿಕವು ಈಶ್ವರನ ಸ್ವತ್ತು ಆ ಈಶ್ವರನು ನಮ್ಮ ಮೇಲೆ ಕರುಣೆ ಇಡಲೆಂದು **ಓಂ ಶಾಂತಿಃ** ಎಂದು ಇನ್ನು ಅಧ್ಯಾತ್ಮಿಕವೆಂದರೆ – ನಮ್ಮ ಶರೀರವು ಬೋಧಾ ಕಾಲದಲ್ಲಿ ಸ್ವಚ್ಛಂದವಾಗಿರಬೇಕಲ್ಲವೇ? ರೋಗ ರುಜಿನ, ತಂಪು, ತಲೆ ತಿರುಗುವುದು, ತಲೆ ನೋಯುವುದು ಆಗಬಾರದು. ಆದ್ದರಿಂದ ಅಧ್ಯಾತ್ಮಿಕ ದುಃಖಗಳು ನಿರ್ವಾಣೆ ಆಗಲೆಂದು **ಓಂ ಶಾಂತಿ** ಎಂದು ಉಚ್ಚರಿಸಬೇಕು.

ಇನ್ನು ಕೆಲವು ಮಹಾತ್ಮರು ಸ್ಥೂಲ, ಸೂಕ್ಷ್ಮ ಮತ್ತು ಕಾರಣ ದೇಹಗಳು ಶಾಂತವಾಗಿರಲಿ ಎಂದೂ – ಏಕೆಂದರೆ ಯಾವ ದೇಹದಲ್ಲಿ ಆಯಾಸವಾದರೂ ಬೋಧೆ ಅರ್ಥವಾಗುವುದಿಲ್ಲ ಎಂದು **ಶಾಂತಿಃ** ಪದಕ್ಕೆ ಅರ್ಥ ಮಾಡುತ್ತಾರೆ.

ಇನ್ನು ಕೆಲವು ಮಹಾತ್ಮರು ವ್ಯಕ್ತಿ, ಸಮಾಜ, ದೇಶ ಶಾಂತಿಯಾಗಲೆಂದೂ ಹೀಗೆ ಮೂರು ಸಾರಿ ಹೇಳುವ ಶಾಂತಿ ಪದಗಳಿಗೆ ಬೇರೆ ಬೇರೆ ಅರ್ಥ ಹೇಳುತ್ತಾರೆ. ಒಂದು ರೀತಿಯಿಂದ ಎಲ್ಲವೂ ಸರಿಯೆ.

ಈ ಎಲ್ಲಾ ಕಾರಣಗಳಿಂದ ಪ್ರತಿ ಪ್ರವಚನ ಆರಂಭದಲ್ಲಿಯೂ ಅಂತ್ಯದಲ್ಲಿಯೂ ಸಮಾಧಾನವಾಗಲೆಂದು ಈ ಶಾಂತಿ ಮಂತ್ರದಿಂದ ಪ್ರಾರಂಭ ಮಾಡೋಣ. ಇದರಿಂದ ಸರ್ವವೂ ಶಾಂತಿಯಾಗಿ ನಮ್ಮ ಅಧ್ಯಯನವು ಯಾವ ಅಡಚಣೆ ಇಲ್ಲದಂತೆ ನಡೆಯಲೆಂದು ಹೃತ್ಪೂರ್ವಕವಾಗಿ ಪ್ರಾರ್ಥಿಸೋಣ. [**ಮುಂದುವರಿಯುವುದು**]

**ಓಂ ಶಾಂತಿಃ ಶಾಂತಿಃ ಶಾಂತಿಃ**

## ಶಿವ ಪಂಚಾಕ್ಷರಿ ಮಂತ್ರದ ವಿಧಿ-ಸಂಕಲ್ಪ

**(ಶ್ರೀ ಶಿವ ಪಂಚಾಕ್ಷರಿ ಜಪಯಜ್ಞದ ವಿಶೇಷ ಲೇಖನ)**

**– ಶ್ರೀಮತಿ ಮಾತೆ ನಾಗರತ್ನಮ್ಮ, ಬೆಂಗಳೂರು**

ಶಿವ ಪಂಚಾಕ್ಷರಿ ಮಂತ್ರವಾದ **'ಓಂ ನಮಃ ಶಿವಾಯ'** ಬಹಳ ಪವಿತ್ರವಾದುದು. ಇದನ್ನು ಪುರಶ್ಚರಣೆ ಮಾಡಿದರೆ ಮಂತ್ರ ಸಾಕ್ಷಾತ್ಕಾರಗೊಳಿಸಬಹುದು. ಈ ಮಂತ್ರವನ್ನು ವಿಧಿ-ಸಂಕಲ್ಪ ಪೂರ್ವಕವಾಗಿ ಜಪ ಮಾಡಿದರೆ ಅದರ ಲಾಭ ದುಪ್ಪಟ್ಟು.

ಓಂ ಅಸ್ಯ ಶ್ರೀ ಶಿವಪಂಚಾಕ್ಷರೀ ಮಹಾಮಂತ್ರಸ್ಯ ವಾಮದೇವ ಋಷಿಃ ಪಂಕ್ತಿಚ್ಛಂದಃ

**''ಕರ್ಮಣ್ಯೇ ವಾಧಿಕಾರಸ್ತೇ ಮಾಫಲೇಷು ಕದಾಚನಃ''**
ಕರ್ಮ ಮಾಡುವುದರಲ್ಲಿಯೇ ನಿನಗೆ ಅಧಿಕಾರ ಇದೆ.
ಆದರೆ ಕರ್ಮಫಲದಲ್ಲಿ ಯಾವಾಗಲೂ ಅಧಿಕಾರವಿಲ್ಲ (ಗೀತೆ 2-43)



ಸದಾಶಿವೋ ದೇವತಾ ಓಂ ಬೀಜಂ ಉಮಾ ಶಕ್ತಿ ಶಿವ ಇತಿ ಕೀಲಕಂ । ಮಮ ॥ ಸಾಂಬ ಸದಾಶಿವ ಪ್ರಸಾದ ಸಿದ್ಧ್ಯರ್ಥೇ ಜಪೇ ವಿನಿಯೋಗಃ ॥

**ಅಥ ಕರನ್ಯಾಸ** (ಇದನ್ನು ಬಲ್ಲವರಿಂದ ಕಲಿಯಬೇಕು)

ಓಂ ಯಂ ಓಂ ಸರ್ವಜ್ಞಶಕ್ತಿಧಾಮ್ನೇ **ಇತಿ ಅಂಗುಷ್ಠಾಭ್ಯಾಂ ನಮಃ**

ಓಂ ವಾಂ ಓಂ ತೃಪ್ತಿ ಶಕ್ತಿಧಾಮ್ನೇ **ಇತಿ ತರ್ಜನೀಭ್ಯಾಂ ನಮಃ**

ಓಂ ಶಿಂ ಓಂ ಅನಾದಿ ಬೋಧ ಶಕ್ತಿಧಾಮ್ನೇ **ಇತಿ ಮಧ್ಯಮಾಭ್ಯಾಂ ನಮಃ**

ಓಂ ಮಂ ಓಂ ಸ್ವತಂತ್ರ ಶಕ್ತಿಧಾಮ್ನೇ **ಇತಿ ಅನಾಮಿಕಾಭ್ಯಾಂ ನಮಃ**

ಓಂ ನಂ ಓಂ ಅಲುಪ್ತ ಶಕ್ತಿಧಾಮ್ನೇ **ಇತಿ ಕನಿಷ್ಠಿಕಾಭ್ಯಾಂ ನಮಃ**

ಓಂ ಓಂ ಓಂ ಅನಂತ ಶಕ್ತಿಧಾಮ್ನೇ **ಇತಿ ಕರತಲಕರ ಪೃಷ್ಠಾಭ್ಯಾಂ ನಮಃ**

**ಇತಿ ಕರನ್ಯಾಸಃ**

**ಅಥ ಹೃದಯಾದಿನ್ಯಾಸಃ**

ಓಂ ಶಿಂ ಓಂ ಅಘೋರಾಯ ನಮಃ **ಇತಿ ಹೃದಯಾಯ ನಮಃ**

ಓಂ ವಾಂ ಓಂ ತತ್ಪುರುಷಾಯ ನಮಃ **ಇತಿ ಮುಖೆ**

ಓಂ ಯಂ ಓಂ ಈಶಾನಾಯ ನಮಃ **ಇತಿ ಶಿರಸೇ ಸ್ವಾಹಾ**

ಓಂ ನಂ ಓಂ ಸದ್ಯೋಜಾತಯ ನಮಃ **ಇತಿ ಪಾದಯೋಃ**

ಓಂ ಮಂ ಓಂ ವಾಮದೇವಾಯ ನಮಃ **ಇತಿ ಗುಹ್ಯೇ**

ಓಂ ಓಂ ಓಂ ಪ್ರಣವಾಯ ನಮಃ **ಇತಿ ಸರ್ವಾಂಗೇ**

**ಇತಿ ದೇಹನ್ಯಾಸಃ**

**ಅಥ ಷಡಂಗ ನ್ಯಾಸಃ**

ಓಂ ಶಿಂ ಓಂ ಸ್ವತಂತ್ರ ಶಕ್ತಿಧಾಮ್ನೇ **ಕವಚಾಯ ಹುಮ್**

ಓಂ ವಾಂ ಓಂ ಅಲುಪ್ತ ಶಕ್ತಿಧಾಮ್ನೇ **ಇತಿ ನೇತ್ರತ್ರಯಾಯ ವೌಷಟ್**

ಓಂ ಯಂ ಓಂ ಅನಂತ ಶಕ್ತಿಧಾಮ್ನೆ **ಇತಿ ಅಸ್ತ್ರಾಯಫಟ್**

ಓಂ ನಂ ಓಂ ತೃಪ್ತಿ ಶಕ್ತಿಧಾಮ್ನೇ **ಇತಿ ಶಿರಸೇ ಸ್ವಾಹಾ**

ಓಂ ಮಂ ಓಂ ಅನಾದಿಬೋಧ ಶಕ್ತಿಧಾಮ್ನೇ **ಇತಿ ಶಿಖಾಯೈ ವಷಟ್**

ಓಂ ಓಂ ಓಂ ಸರ್ವಜ್ಞಶಕ್ತಿಧಾಮ್ನೇ **ಇತಿ ಹೃದಯಾಯ ನಮಃ**

**ಅಥ ಧ್ಯಾನಮ್**

ಓಂ ಶಾಂತಂ ಪದ್ಮಾಸನಸ್ಥಂ ಶಶಿಧರಮುಕುಟಂ ಪಂಚವಕ್ತ್ರಂ

**''ಯೋಗ ಕರ್ಮಸು ಕೌಶಲಮ್''**
ಕುಶಲತೆಯಿಂದ ಕರ್ಮ ಮಾಡಿದರೆ ಅದೇ ಕರ್ಮವು ಯೋಗವಾಗುತ್ತದೆ
(ಗೀತೆ 2-50)

ತ್ರಿನೇತ್ರಂ ಶೂಲಂ ವಜ್ರಂ ಚ ಖಡ್ಗಂ ಪರಶುಮಭಯದಂ
ದಕ್ಷಭಾಗೇ ಮಹಂತಂ ನಾಗಂ ಪಾಶಂ ಚ ಘಂಟಾಂ ಪ್ರಳಯಹುತವ
ಹಮ್ ಸಾಂಕುಶಂ ವಾಮಭಾಗೇ ನಾನಾಲಂಕಾರಯುಕ್ತಂ ಸ್ಫಟಿಕಮಣಿ
ನಿಭಂ ಪಾರ್ವತೀಶಂ ನಮಾಮಿ ॥

**ಅತ ಶಿವ ಗಾಯತ್ರೀಃ**

**ಓಂ ತತ್ಪುರುಷಾಯ ವಿದ್ಮಹೇ ಮಹಾದೇವಾಯ ಧೀಮಹಿ।**

**ತನ್ನೋ ರುದ್ರಃ ಪ್ರಚೋದಯಾತ್** ॥

ಮಂತ್ರಗಳು ವೇದದಲ್ಲಿ ಸಾಕಷ್ಟು ಇವೆ. ಯಾವ ಮಂತ್ರವನ್ನಾದರು ನಾವು ಜಪ ಮಾಡಬಹುದು. **ಮನನಾತ್ ತ್ರಾಯತೇ ಇತಿ ಮಂತ್ರ.** ಯಾರು ಮಂತ್ರವನ್ನು ಪುನಃ ಪುನಃ ಜಪಿಸುತ್ತಾರೋ ಅವರನ್ನು ಮಂತ್ರವು ಎಲ್ಲಾ ರೀತಿಯಿಂದಲೂ ಶಿಕ್ಷಣ ಮಾಡುತ್ತದೆ. ಪ್ರತಿಯೊಂದು ಮಂತ್ರಕ್ಕೆ ಹತ್ತು ಅಂಗಗಳು ಇರುತ್ತವೆ.

ಅದರಲ್ಲಿ ಮೊದಲು **ಮಂತ್ರದ ಋಷಿ,** ಎಂದರೆ ಯಾವ ಋಷಿಯು ಆರಂಭದಲ್ಲಿ ಆ ಮಂತ್ರವನ್ನು ಸಾಕ್ಷಾತ್ಕಾರ ಮಾಡಿಕೊಂಡನೋ ಅವನೇ ಋಷಿ. ಅವನನ್ನು ನಾವು ಹೃದಯದಲ್ಲಿ ನೆನಪು ಮಾಡಿಕೊಳ್ಳಬೇಕು. ಅವನು ನಮಗೆ ಶಕ್ತಿ ಕೊಡುತ್ತಾನೆ.

ಆ ಮಂತ್ರದ ಛಂದಸ್ಸು, ಛಂದಸ್ಸನ್ನು ನಾವು ಉಚ್ಚಾರ ಮಾಡಬೇಕು. ಶಿವ ಪಂಚಾಕ್ಷರಿಗೆ **ಪಂಕ್ತಿಚ್ಛಂದಃ** ಮತ್ತು ಈ ಮಂತ್ರದ ದೇವತೆ ಬೇಕು. ಯಾವ ಮಂತ್ರವು ಯಾವ ದೇವತೆಗಳ ಅಧೀನವಾಗಿರುತ್ತದೆಯೋ ಅದೇ ದೇವತೆ, ಆ ದೇವತೆಯನ್ನು ಸ್ಮರಣೆ ಮಾಡಬೇಕು ಮತ್ತು ಪ್ರತಿಯೊಂದು ಮಂತ್ರಕ್ಕೆ ಒಂದು **ಬೀಜ** ಇರುತ್ತದೆ. ಬೀಜ ಇಲ್ಲದೆ ವೃಕ್ಷವು ಬೆಳೆಯಲಾರವು. ಅದರಂತೆ ಎಲ್ಲಾ ಮಂತ್ರಕ್ಕೆ ಬೀಜ ಇದ್ದೇ ಇರುತ್ತದೆ. ಪ್ರತಿಯೊಂದು ಮಂತ್ರಕ್ಕೂ ಶಕ್ತಿ **ಅಧಿ ದೇವತೆ** ಇರುತ್ತಾಳೆ. ಅವಳನ್ನು ಧ್ಯಾನ ಮಾಡಬೇಕು. ಈ ಪಂಚಾಕ್ಷರಿ ಮಂತ್ರಕ್ಕೆ **"ಉಮಾ ಶಕ್ತಿಃ"** ಎಂದು ಕರೆಯುತ್ತಾರೆ.

ಪ್ರತಿಯೊಂದು ಮಂತ್ರಕ್ಕೆ **ಕೀಲಕ.** ಕೀಲಕ ಎಂದರೇನು? ಆ ಮಂತ್ರವನ್ನು ಎಲ್ಲಿಗೂ ಹೋಗದಂತೆ ಬಿಗಿಯಾಗಿ ಹಿಡಿದಿರುವುದೇ ಕೀಲಕ ಈ ಪಂಚಾಕ್ಷರಿ ಮಂತ್ರಕ್ಕೆ ಕೀಲಕ ಯಾವುದು? ಅದೇ **ಶಿವ,** ಹೀಗೆ **ಮಂತ್ರ, ಋಷಿ, ಛಂದಸ್ಸು, ದೇವತಾ, ಬೀಜ, ಶಕ್ತಿ, ಕೀಲಕ,** ಇವೆಲ್ಲವೂ ಇರಬೇಕು. ನಾವೂ ಈ ಮಂತ್ರದಿಂದ ಏನನ್ನು ಸಿದ್ಧಿ ಮಾಡಿಕೊಳ್ಳಬೇಕು. ಈ ಪಂಚಾಕ್ಷರಿ ಮಂತ್ರದಿಂದ **ಸಾಂಬಶಿವ ಪ್ರಸಾದವನ್ನು** ಸಿದ್ಧಿ ಮಾಡಿಕೊಳ್ಳಬೇಕು. ಆ ಪ್ರಸಾದ ಯಾವುದು? ನಾನು ಆತ್ಮವೆಂದು ಭಾವಿಸುವುದೆ ಪ್ರಸಾದ, ಇದೆಲ್ಲವೂ ಸಹಿತವಾಗಿ ಮಂತ್ರದಲ್ಲಿರಬೇಕು. ನಾವು ಈಗ **'ಓಂ ನಮಃ ಶಿವಾಯ'** ಎಂಬ ಮಂತ್ರವನ್ನು ಮಾತ್ರ ನೋಡುತ್ತಿದ್ದೇವೆ. ಆ ಮಂತ್ರದ ಬೀಜಾಕ್ಷರವನ್ನು ನಾವು ನಮ್ಮ ಕೈಯಲ್ಲಿ ಸ್ಥಾಪಿಸಿ-

---

**"ತತ್ಪರಂ ಪುರುಷ ಖ್ಯಾತೇ ಗುಣವೈ ತೃಷ್ಣಮ್"**

ಈ ದೇಹ ಇಂದ್ರಿಯಗಳು, ಮನಸ್ಸು, ಅಂತಃಕರಣ ಇವು ನಾನಲ್ಲ, ನನ್ನವೂ ಅಲ್ಲ.
ನಾನು ಇವುಗಳಿಂದ ಬೇರೆ ಎಂಬ ವಿವೇಕ ಉಂಟಾಗಬೇಕು. (ಯೋಗ ದರ್ಶನ)



ಕೊಳ್ಳಬೇಕು. ಏಕೆಂದರೆ ಜಪಮಾಲೆಯನ್ನು ಹಿಡಿಯಬೇಕಾದರೆ ನಮ್ಮ ಕೈಯಿಗಳು, ಅಂಗಾಂಗಗಳು ಆಯಾ ಮಂತ್ರಕ್ಕೆ ಸಂಬಂಧಪಡಬೇಕು. **'ಯಂ'** ಎಂಬುದು ಈ ಪಂಚಾಕ್ಷರಿ ಮಂತ್ರದಲ್ಲಿ ಶಕ್ತಿವಂತವಾದುದು. ಆ **'ಯಮ್'** ಎಂಬ ಬೀಜಾಕ್ಷರವನ್ನು ನಮ್ಮ ಕೈಯಿ **ಅಂಗುಷ್ಠದಲ್ಲಿ** ಸ್ಥಾಪನೆ ಮಾಡಬೇಕು.

ಹಾಗೆಯೆ **'ವಾಂ'** ಎಂಬುದು ತೃಪ್ತಿ ಶಕ್ತಿಃ ಅದನ್ನು ನಮ್ಮ **ತರ್ಜನಿ ಬೆರಳಿನಲ್ಲಿ** ಸ್ಥಾಪನೆ ಮಾಡಿಕೊಳ್ಳಬೇಕು.

**'ಶಿಮ್'** ಎಂಬುದು ಅನಾದಿ ಕಾಲದ ಶಕ್ತಿ. ಅದನ್ನು **ಮಧ್ಯಮ ಬೆರಳಿನಲ್ಲಿ** ಸ್ಥಾಪನೆ ಮಾಡಿಕೊಳ್ಳಬೇಕು. ಅದಕ್ಕೆ ನಮಸ್ಕಾರ ಮಾಡಬೇಕು.

**'ಮಮ್'** ಎಂಬ ಬೀಜವು ಸ್ವತಂತ್ರ ಶಕ್ತಿ ಸ್ವರೂಪವಾದುದು. ಅದನ್ನು **ಅನಾಮಿಕ ಬೆರಳಿನಲ್ಲಿ** ಸಂಸ್ಥಾಪನೆ ಮಾಡಿಕೊಳ್ಳಬೇಕು. ಆ ಬೆರಳಿಗೆ ಹೆಸರು ಇಲ್ಲ.

**'ನಮ್'** ಎಂಬುದು ಅಲುಪ್ತ ಶಕ್ತಿ. ಅಂದರೆ ಎಂದೆಂದೂ ಲುಪ್ತವಾಗದ ಕಡಿಮೆಯಾಗದ ಶಕ್ತಿ. ಅದನ್ನು ಕೊನೆಯ ಬೆರಳು **ಕನಿಷ್ಠ ಬೆರಳಿನಲ್ಲಿ** ಅದನ್ನು ಸ್ಥಾಪನೆ ಮಾಡಿ ಅದನ್ನು ನಮಸ್ಕರಿಸಬೇಕು.

**'ಓಂ'** ಎಂಬ ಅನಂತ ಶಕ್ತಿವುಳ್ಳ ಬೀಜವನ್ನು ಕೈಯಿಗಳ ಕೆಳಗೆ ಮೇಲೆ ಒಂದಕ್ಕೊಂದು ತಾಡನೆ ಮಾಡಿ ಅದಕ್ಕೆ ನಮಸ್ಕಾರ ಮಾಡಬೇಕು.

ಇಲ್ಲಿಗೆ ನಮ್ಮ ಜಪ ಮಾಲೆಯನ್ನು ಹಿಡಿಯುವ ಕೈಯಿಗಳು ಮಂತ್ರ ಪೂರಿತವಾದವು. ಆಗ ಮಂತ್ರ ಪೂರ್ವಕವಾದ ಕೈಯಿಗೆ ಜಪಮಾಲೆ ಹಿಡಿಯುವ ಶಕ್ತಿ ಬಂತು. ಕೈಯಿ ಎಲ್ಲಾ ಮಂತ್ರಮಯವಾದವು. ಮಾಂಸ ಮಯವಾದ ಕೈಯಿಗಳು ಮಂತ್ರ ಮಯವಾಗದೆ ಹೋದರೆ ಮಂತ್ರ ಸ್ವರೂಪವಾದ ಜಪಮಾಲೆ ಹಿಡಿಯುವುದಕ್ಕೆ ಶಕ್ತಿ ಬರುವುದಿಲ್ಲ.

**ಇನ್ನು ಮುಂದೆ ಹೃದಯಾದಿ ನ್ಯಾಸಃ**

ಇಲ್ಲಿ ಮೊದಲು **'ಶಿ'** ಎನ್ನುವುದೇ ಭಗವಂತನ ಆರು ಮುಖದಲ್ಲಿ ಒಂದು ಮುಖವಾದ ಅಘೋರ ಸ್ವರೂಪವಾದುದು. ಅದನ್ನು ಹೃದಯದಲ್ಲಿ ಸ್ಥಾಪಿಸಿಕೊಳ್ಳಬೇಕು. ಅದಕ್ಕಾಗಿ **ಹೃದಯಾಯ ನಮಃ, 'ಶಿಂ'** ಎಂಬುದು ಹೃದಯದ ದೇವತೆ.

**'ವಾಮ್'** ಇದು ಪರಮಾತ್ಮನ ಎರಡನೆಯ ಮುಖವಾದ ತತ್ಪುರುಷ ಸಮಾನವಾದುದು. ಅದನ್ನು **ಮುಖದಲ್ಲಿ ಸ್ಥಾಪನೆ ಮಾಡಿಕೊಳ್ಳಬೇಕು.**

**'ಯಮ್'** ಎಂಬುದು ಭಗವಂತನ ಮೂರನೆಯ ಮುಖ **'ಆ ಮೂರನೆಯ'** ಮುಖವನ್ನು ನಾವು ನಮ್ಮ ಶಿರಸ್ಸಿನಲ್ಲಿ ಸ್ಥಾಪನೆ ಮಾಡಬೇಕು. ಮೂರು ಬೆರಳನ್ನು ತೆಗೆದುಕೊಳ್ಳಬೇಕು. ಒಂದು ಅಂಗುಷ್ಟ, ಮಧ್ಯದ ಬೆರಳು ಮತ್ತೊಂದು ಅನಾಮಿಕ ಬೆರಳು ಈ ಮೂರು ಸೇರುವುದೇ ಸದ್ಯೋಜಾತ ಮುಖ. ಆ **'ನಂ'** ಬೀಜಾಕ್ಷರವನ್ನು ಪಾದದಲ್ಲಿ ಸ್ಥಾಪನೆ ಮಾಡಿಕೊಳ್ಳಬೇಕು.

---

**"ಯನ್ಮನಸಾನುಮನತೆ ಯೇ ನಾರ್ಹು ಮನೋಮತಮ್"**

ಯಾವುದು ಮನಸ್ಸಿನಿಂದ ಮನನ ಮಾಡಲು ಆಗುವುದಿಲ್ಲವೋ, ಯಾವುದು
ಮನಸ್ಸಿಗೆ ಮನನ ಮಾಡುವ ಶಕ್ತಿ ಕೊಟ್ಟಿರುವುದೋ ಅದೇ ಪರಮಾತ್ಮ (ಕೇನ.ಉ.)

**'ಮಮ್'** ಎಂಬ ಬೀಜಾಕ್ಷರವು ವಾಮದೇವ ಸ್ವರೂಪವಾದುದು. ಅದನ್ನು ನಾವು ನಮ್ಮ ಗುಹ್ಯೇಂದ್ರಿಯದಲ್ಲಿ ಸ್ಥಾಪನೆ ಮಾಡಿಕೊಳ್ಳಬೇಕು. **'ಓಂ'** ಎಂಬುದು ಪ್ರಣವ ಅದನ್ನು ದೇಹದ ಸರ್ವಾಂಗಗಳಲ್ಲಿ ಸ್ಥಾಪನೆ ಮಾಡಿಕೊಳ್ಳಬೇಕು. ಈಗ ನಮ್ಮ ದೇಹವು ಆರು ಮುಖವುಳ್ಳ ಪರಮಾತ್ಮನ ಸ್ವರೂಪವೇ ಆಯಿತು. ಎಲ್ಲೆಲ್ಲಿಯೂ ಬೀಜಾಕ್ಷರ ನಿಂತುಕೊಂಡು ಹೊರಗಿನ ಭೌತಿಕ ವಸ್ತುಗಳು ಒಳಗೆ ಬರದಂತೆ ನೋಡಿಕೊಳ್ಳುತ್ತವೆ.

**ಷಡಂಗಗಳು :** ಅಂದರೆ ದೇಹ ಭಾಗಗಳಲ್ಲಿಯೂ ಈ ಮಂತ್ರದ ಬೀಜಗಳನ್ನು ಸ್ಥಾಪನೆ ಮಾಡಿಕೊಳ್ಳಬೇಕು.

**'ಶಿಂ'** ಇದು ಸ್ವತಂತ್ರ ಶಕ್ತಿ ಪೂರ್ವಕವಾದುದು. ಆ **'ಶಿಂ'** ಎಂಬುದನ್ನು ನಮ್ಮ ಎರಡು ಕೈಯಿಗಳಿಗೆ ಶಕ್ತಿಯನ್ನು ತುಂಬಬೇಕು.

**'ವಾಮ್'** ಅದು ಎರಡನೆಯ ಬೀಜಾಕ್ಷರ. ಅದಕ್ಕೆ ಅಲುಪ್ತ ಶಕ್ತಿ ಇರುತ್ತದೆ. ಅಂದರೆ ಎಂದೆಂದೂ ಹೋಗದೆ ಇರುವ ಶಕ್ತಿ ಇರುತ್ತದೆ. ಅದನ್ನು ಮೂರು ಬೆರಳುಗಳಲ್ಲಿ **'ನೇತ್ರ ತ್ರಯಾಯ ವಷಟ್'** ಎಂದು ಸ್ಥಾಪನೆ ಮಾಡಿಕೊಳ್ಳಬೇಕು. ಅವನ್ನು ಒಂದು ಹೆಬ್ಬೆರಳು ಬಲಕಣ್ಣಿಗೂ ಅನಾಮಿಕ ಬೆರಳು ಎಡಗಣ್ಣಿಗೂ ಮುಟ್ಟಿಸಿಕೊಂಡು ಅವುಗಳಿಗೆ ಶಕ್ತಿಯನ್ನು ತುಂಬಿ ಅದೇ ಅನಾಮಿಕ ಬೆರಳನ್ನು ಭೂ ಮಧ್ಯದಲ್ಲಿರುವ ಮೂರನೆಯ ಬ್ರಹ್ಮ ನೇತ್ರವನ್ನು ಮುಟ್ಟಿಕೊಳ್ಳಬೇಕು. ಆಗ ಮೂರು ನೇತ್ರಗಳಿಗೂ ಎಂದೆಂದೂ ಲುಪ್ತವಾಗದ ಶಕ್ತಿಯನ್ನು ತುಂಬಿದಂತೆ ಆಯಿತು.

**'ಯಮ್'** ಎಂಬುದು ಅನಂತ ಶಕ್ತಿಯಿಂದ ಕೂಡಿಕೊಂಡಿದೆ. ಅದಕ್ಕೆ ಮಹಾ ಶಕ್ತಿ ಉಂಟು. ಆ ಮಂತ್ರವನ್ನು ಹೇಳಿ **'ಅಸ್ತ್ರಾಯಪಟ್'** ಎಂದು ಕೈಯನ್ನು ಬಲಗೈಯಿಂದ ತೆಗೆದುಕೊಂಡು ಎಡಗೈಗೆ ಹೊಡೆಯಬೇಕು.

**'ನಮ್'** ಬೀಜಾಕ್ಷರ, ಇದು ತೃಪ್ತಿ ಶಕ್ತಿವುಳ್ಳದ್ದು. ಎಷ್ಟು ಸಾಧ್ಯವೋ ಅಷ್ಟು ಶಕ್ತಿಯನ್ನು ಇದು ಕೊಡುತ್ತದೆ. ಆ ಮಂತ್ರ ಉಚ್ಚಾರ ಮಾಡಿ ಶಿರಸ್ಸಿನ ಮೇಲೆ ಮೂರು ಬೆರಳನ್ನು ಇಡಬೇಕು.

**'ಮಮ್'** ಇದು ಅನಾದಿಯಾದ ಪರಮಾತ್ಮನ ಶಕ್ತಿಯ ಸ್ಥಾನವನ್ನು ಅದು ತೆರೆಯುತ್ತದೆ. ಆಗ ನಮ್ಮ ಮೂರು ಬೆರಳುಗಳಿಂದ ಶಿಖೆಯನ್ನು ಮುಟ್ಟಿಕೊಳ್ಳಬೇಕು.

**'ಓಂ'** ಅದಕ್ಕೆ ಸರ್ವಜ್ಞ ಶಕ್ತಿವುಳ್ಳದ್ದು. ಅದು ಸದಾ ಹೃದಯದಲ್ಲಿರುತ್ತದೆ. ಹೃದಯದಲ್ಲಿರುವ ಓಂಕಾರ ಬೀಜಾಕ್ಷರಕ್ಕೆ ನಮಸ್ಕಾರ ಮಾಡಬೇಕು. ಈಗ ಕೈಯಿಗಳಲ್ಲಿ ಮಂತ್ರದ ಬೀಜಾಕ್ಷರವನ್ನು ಸರ್ವ ದೇಹದಲ್ಲಿ ಮಂತ್ರದ ಬೀಜಾಕ್ಷರವನ್ನು ಶರೀರದ ಬೇರೆ ಬೇರೆ ಎಲ್ಲಾ ಅಂಗಾಂಗಗಳಲ್ಲಿ ಮಂತ್ರದ ಬೀಜಾಕ್ಷರಗಳನ್ನು ಮಾಡಿಕೊಂಡಂತೆ ಆಯಿತು. ಈಗ ಜಪಮಾಲೆಯನ್ನು ಹಿಡಿಯುವ ಕೈಯಿಗಳು ಮಂತ್ರಮಯವಾದವು. ಮಂತ್ರವನ್ನು ಉಚ್ಚಾರ ಮಾಡುವ ಕೈ ಶಿರಸ್ಸು, ಶಿಖೆ, ಹೃದಯ ಎಲ್ಲವೂ ಮಂತ್ರಪೂರಿತವಾದವು. ಇಂತಹ ಮಂತ್ರ ಪೂರಿತವಾದ ದೇಹವನ್ನು ಮನಸ್ಸನ್ನು ಯಾವ ರೀತಿಯಿಂದಲೂ

**''ಸಹನಂ ಸರ್ವ ದುಃಖಾನಾಂ ಅಪ್ರತಿಕಾರ ಪೂರ್ವಕಂ ಚಿಂತಾ ವಿಲಾಪ ರಹಿತಂ ಸಾ ತಿತಕ್ಷಾನಿಗದ್ಯತೇ''**–ಯಾರು ಬರುವ ದುಃಖಗಳನ್ನು ಪ್ರತೀಕಾರ ಮಾಡದೆ ಸಹಿಸುತ್ತಾರೆಯೋ ಮತ್ತು ಚಿಂತೆ ಮಾಡದೆ ಸಹಿಸುತ್ತಾರೋ ಅದೇ ತಿತೀಕ್ಷೆ (ವಿವೇಕ ಚೂಡಾಮಣಿ)



ಪ್ರಪಂಚಾಕಾರವನ್ನಾಗಿ ಮಾಡಬಾರದು. ಪ್ರಪಂಚಾಕಾರವಾದರೆ ನೀನು ಎಷ್ಟು ಮಂತ್ರ ಜಪ ಮಾಡಿದರು ಪ್ರಯೋಜನವಾಗಲಾರದು.

ನಂತರ ಧ್ಯಾನ ಮತ್ತು ಶಿವ ಗಾಯತ್ರೀಃ ಮಂತ್ರ ಉಚ್ಚಾರವನ್ನು ಮಾಡಿ ನೂರೆಂಟು ಮಣಿಗಳಿರುವ ಜಪ ಮಾಲೆಯನ್ನು ತೆಗೆದುಕೊಳ್ಳಬೇಕು. ಹೇಗೆ ಹೆಬ್ಬೆರಳು, ಮಧ್ಯದ ಬೆರಳು, ಅನಾಮಿಕ ಬೆರಳು, ಈ ಮೂರರಿಂದ ಜಪ ಮಾಲೆಯ ಶಿಖಾಮಣಿಯನ್ನು ತೆಗೆದುಕೊಳ್ಳಬೇಕು. ಅದನ್ನು ಎಡಗೈಯಲ್ಲಿ ಇಟ್ಟುಕೊಂಡು ಬಲಗೈಯನ್ನು ಮುಚ್ಚಿಕೊಳ್ಳಬೇಕು. ಅದನ್ನು **ಬಲಗಡೆ ತೊಡೆಯ ಮೇಲೆ ಇಟ್ಟುಕೊಂಡು ನೀವು ಮಂತ್ರ ಜಪ ಮಾಡುವ ಮಂತ್ರವನ್ನು ಒಂದು ಸಾರಿ ಹೇಳಬೇಕು. ಎಡಗಡೆ ತೊಡೆಯ ಮೇಲೆ ಇಟ್ಟುಕೊಂಡು ಹನ್ನೊಂದು ಸಾರಿ ಹೇಳಬೇಕು.** ಜಪ ಸರವನ್ನು ಮೂರು ಬೆರಳಿನಿಂದ ಹಿಡಿದುಕೊಂಡು ಜಪ ಮಾಲೆ ಸರವನ್ನು ಒಂದೊಂದು ಮಂತ್ರವನ್ನು ಒಂದೊಂದು ಮಣಿಯನ್ನು ಹಿಂದಕ್ಕೆ ಕಳಿಸುತ್ತಾ ಜಪ ಮಾಡಬೇಕು.

ಇನ್ನೊಂದು ಮುಖ್ಯವಾದ ವಿಷಯ ಎಂದರೆ ನಮ್ಮ ಕಣ್ಣು ಮುಚ್ಚಿಕೊಂಡಿರಬೇಕು. ಏಕೆಂದರೆ ಕಣ್ಣುಗಳನ್ನು ತೆರೆದರೆ ನಮ್ಮ ಅಂತಃಕರಣ ದೃಷ್ಟಿ ಪ್ರಪಂಚಕಾರವಾಗುತ್ತದೆ. ಆದ್ದರಿಂದ ಮುಚ್ಚಿಕೊಂಡು ನಮ್ಮ ಮುಂದೆ **'ಓಂ ನಮಃ ಶಿವಾಯ'** ಮಂತ್ರವಿದೆ. ಅದನ್ನು ಹೃದಯದ ಕಣ್ಣಿನಿಂದಲೇ ನೋಡುತ್ತಿರಬೇಕು. ಮಾನಸಿಕ ವೃತ್ತಿಯು ಸದಾ ಆ ಮಂತ್ರದಲ್ಲಿಯೇ ತಲ್ಲೀನವಾಗಿರಬೇಕು. ಹೀಗೆ ಸದಾ ಜಪವನ್ನು ಮಾಡಿ ನಮ್ಮನ್ನು ನಾವು ಉದ್ಧಾರ ಮಾಡಿಕೊಳ್ಳಬೇಕು.

## ಕೆಲವು ಮಂತ್ರಗಳು

**'ಓಮ್'** ಎಂಬುದು ಎಲ್ಲೆಲ್ಲಿಯೂ ವ್ಯಾಪಕವಾಗಿರುವ ಅಕ್ಷರ **'ಕ್ಷರ'** ಎಂದರೆ ನಾಶ, **'ಅಕ್ಷರ'** ಎಂದರೆ ಎಂದೆಂದೂ ನಾಶವಾಗದೆ ಇರುವುದು.

**'ಸೋಽಹಮ್'** ಅದು ಎರಡು ಅಕ್ಷರದ ಮಂತ್ರ.

**'ಓಂ ನಮಃ ಶಿವಾಯ'** ಇದು ಪಂಚಾಕ್ಷರಿ ಮಂತ್ರ ಮತ್ತು ಷಡಾಕ್ಷರ ಮಂತ್ರವು ಆಗುತ್ತದೆ. ಹೀಗೆ ಮಂತ್ರಗಳು, ಸಪ್ತಾಕ್ಷರ ಮಂತ್ರ, **''ಅಷ್ಟಾಕ್ಷರ ಮಂತ್ರ'',** ನವಮಾಕ್ಷರ ಮಂತ್ರ ಹಾಗೂ ದ್ವಾದಶ ಮಂತ್ರದವರೆಗೂ ಅವೆಲ್ಲವೂ ಮಂತ್ರಗಳೇ. ಆದರೆ ವೇದದಲ್ಲಿ ಗಾಯತ್ರಿ ಮಂತ್ರವು 24 ಅಕ್ಷರದಿಂದ ಪರಿಶೋಭಿಸುತ್ತದೆ. ಅದನ್ನು ವಿದ್ಯಾರಣ್ಯಸ್ವಾಮಿ–ಗಳವರು ಅಕ್ಷರಕ್ಕೆ ಲಕ್ಷ ಜಪ ಮಾಡಿ ವಿಜಯನಗರವನ್ನು ಸಂಸ್ಥಾಪನೆ ಮಾಡಿದರು. ಗುರುಕೊಟ್ಟ ಮಂತ್ರವನ್ನು ಅದು ನಮ್ಮದಾಗಬೇಕಾದರೆ ಅದನ್ನು ಜಪ ಮಾಡಲೇಬೇಕು. ಗುರುವು ಕಿವಿಯಲ್ಲಿ ಹೇಳಿದಾಕ್ಷಣ ಅದರ ಪ್ರಭಾವವುಂಟಾಗಲಾರದು. ಅದನ್ನು ನಮ್ಮದನ್ನಾಗಿ ಮಾಡಿಕೊಳ್ಳಬೇಕು. ಹೀಗೆ ಮನುಷ್ಯನು ಮಾಂಸಮಯ ದೇಹವನ್ನು ಮಂತ್ರಮಯವನ್ನಾಗಿ ಮಾಡಿಕೊಂಡು ತನ್ನನ್ನು ತಾನು ಉದ್ಧಾರ ಮಾಡಿಕೊಳ್ಳಬೇಕು.

**''ದೇಹಾತ್ಮ ಬುದ್ಧಿ ಜಂ ವಿದ್ಧಿ ನತದ್ಗೋವಧ ಕೋಟಿಭಿ ಬ್ರಹ್ಮಾತ್ಮ ಬುದ್ಧಿ ಜಂ ವಿದ್ಧಿ ನ ಭೂತೋ ನಭವಿಷ್ಯತೇ''**
ಒಂದು ಸಾರಿ ನಾನು ದೇಹವೆಂದರೆ ಒಂದು ಕೋಟಿ ಗೋವುಗಳನ್ನು ಕೊಂದ ಪಾಪ ಬರುತ್ತದೆಒಂದು ಸಾರಿ ನಾನು ಬ್ರಹ್ಮವೆಂದರೆ ಹಿಂದೆ ಮಾಡಿದ ಮುಂದೆ ಮಾಡಲಿರುವ ಎಲ್ಲಾ ಪಾಪಗಳು ನಿವಾರಣೆಯಾಗುತ್ತವೆ.

## ಮಂತ್ರ ಪುರಶ್ಚರಣೆ

1) ಶ್ರೀ ಗುರುವಿನಿಂದ ಪಡೆದ ಮಂತ್ರವನ್ನು ಪುನಃ ಪುನಃ ಉಚ್ಚರಿಸುವುದೇ ಜಪ ಅಥವಾ ಮಂತ್ರ ಪುರಶ್ಚರಣೆ.

2) **ಗುರು:** ಶುದ್ಧ ಚಾರಿತ್ರವಂತನೂ, ಮಂತ್ರದ ಬಗ್ಗೆ ಜ್ಞಾನವುಳ್ಳವನೂ, ದೀಕ್ಷೆ ನೀಡಲು ಅರ್ಹತೆಯುಳ್ಳವನು, ತಾನು ಬ್ರಹ್ಮಸ್ವರೂಪನೆಂಬ ದೃಢವಾದ ಅನುಭವವವುಳ್ಳವನೇ ಗುರುವಾಗಲು ಅರ್ಹನು ಮತ್ತು ದೀಕ್ಷೆ ನೀಡುವ ಪ್ರಕ್ರಿಯೆಗಳಲ್ಲಿ ನೈಪುಣ್ಯ, ಸರ್ವ ಜೀವಿಗಳಲ್ಲಿ ಕರುಣೆ, ಆತ್ಮನಿಗ್ರಹ, ತೃಪ್ತಿ, ಶಿಷ್ಯ ವಾತ್ಸಲ್ಯ, ನಿಷ್ಪಕ್ಷಪಾತ, ಶುದ್ಧ ಚಾರಿತ್ರ್ಯ, ಶಾಸ್ತ್ರ ನೈಪುಣ್ಯ, ಸ್ತ್ರೀಯರು ಮತ್ತು ಹಣದ ವಿಷಯದಲ್ಲಿ ವಿರಕ್ತಿ ಇವು ಗುರುವಿನ ಲಕ್ಷಣ.

3) **ಶಿಷ್ಯ :** ಶಿಷ್ಯನು ಗುರುವಿನಲ್ಲಿ ವಿಧೇಯತೆ, ಗುರುವಿನ ಬಗ್ಗೆ ಪೂರ್ಣ ಶ್ರದ್ಧೆ ಮತ್ತು ಅತೀವ ಗೌರವ, ಶುದ್ಧ ಚಿತ್ತ, ನಿತ್ಯ ನಿಷ್ಠೆ, ಉಪದೇಶ ಗ್ರಹಿಸಲು ತೀಕ್ಷ್ಣವಾದ ಬುದ್ಧಿ, ವಾಣಿಯ ಸಂಯಮ ಇರುವವನೇ ಶಿಷ್ಯ.

4) **ದೀಕ್ಷೆ :** ಅಂದರೆ **ದೀಯತೇ,** ಗುರುವು ಮಂತ್ರವನ್ನು ನೀಡಿದಾಗ **ಕ್ಷೀಯತೇ,** ಶಿಷ್ಯನ ಪಾಪಗಳೆಲ್ಲಾ ನಾಶವಾಗುವುವು. ಅದೇ ದೀಕ್ಷಾ. ಈ ದೀಕ್ಷೆಯು ಕ್ರಿಯಾವತೀ, ವರ್ಣಮಯೀ, ಕಲಾವತಿ ಮತ್ತು ವೇದಮಯೀ ಎಂದು ನಾಲ್ಕು ಬಗೆಯಾಗಿದೆ. ದೀಕ್ಷೆಯನ್ನು ಗ್ರಹಣ ಕಾಲದಲ್ಲಿ ಕೊಡುವುದು ಅತ್ಯುತ್ತಮ ಎಂದು, ಶಾಸ್ತ್ರೋಕ್ತಿ. ಸ್ಥಳ ಪರಿಶುದ್ಧವಾಗಿರಬೇಕು. ಅಂದರೆ ಆಶ್ರಮ, ತೀರ್ಥಕ್ಷೇತ್ರ, ನದಿ ದಂಡೆ ಇವೆಲ್ಲ ಉತ್ತಮ ಸ್ಥಳಗಳು.

5) **ಮಂತ್ರ : "ಮನನಾತ್ ತ್ರಾಯತೇ ಮಂತ್ರ"** ಯಾವುದನ್ನು ಮನನ ಮಾಡುತ್ತೇವೆಯೋ, ಅದು ನಮ್ಮನ್ನು ರಕ್ಷಿಸುತ್ತದೆಯೋ ಅದೇ ಮಂತ್ರ ಯಾವುದು ಸಂಸಾರ ಬಂಧನದಿಂದ ರಕ್ಷಣೆ ಕೊಡುತ್ತದೆಯೋ ಅದೇ ಮಂತ್ರ.

6) **ದೇವತೆ :** ಮಂತ್ರ ಮತ್ತು ದೇವತೆಗೆ ಅನನ್ಯ ಸಂಬಂಧವಿದೆ.

7) **ನಿಯಮಗಳು :** ಮಂತ್ರ ಪುರಶ್ಚರಣೆ ಮಾಡುವಾಗ ಬ್ರಾಹ್ಮೀ ಮುಹೂರ್ತ ಒಳ್ಳೆಯದು. ಶೌಚ, ಸ್ನಾನಾದಿಗಳ ನಂತರ ನಿತ್ಯಕರ್ಮಾನುಷ್ಠಾನ ಮಾಡಿ ಪುರಶ್ಚರಣೆ ಆರಂಭಿಸಬೇಕು. ಚಾಪೆ ಮೇಲೆ ಕೂತು ಮಾಡುವುದು ಒಳ್ಳೆಯದು. ಬ್ರಹ್ಮಚರ್ಯ ಪಾಲನೆ, ಮೌನವಾಗಿರುವುದು, ಪೂಜಾ ಸ್ತೋತ್ರ ಪಠನ, ಸದ್ಗ್ರಂಥ ಪಠಣ, ಮತ್ತೊಬ್ಬರ ಮನೆಯಲ್ಲಿ ಭೋಜನ ಸ್ವೀಕರಿಸಬಾರದು, ಕಾಮ-ಕ್ರೋಧಗಳಿಂದ ದೂರವಿರಬೇಕು, ಸುಳ್ಳನ್ನು ಹೇಳಬಾರದು, ಬಾಯಿಗೆ ಅಧಿದೇವತೆ ಅಗ್ನಿ, ಸುಳ್ಳು ಹೇಳಿದರೆ ಅಗ್ನಿಯಿಂದ ಶಿಕ್ಷೆ ಆಗುತ್ತದೆ. ಜಪವನ್ನು ನಿಮಗೆ ಅನುಕೂಲಕರ ಸನ್ನಿವೇಶ ಒದಗಿದಾಗ ಮಾಡುತ್ತಲೇ ಇರಬಹುದು.

8) **ಆಸನಗಳು :** ದರ್ಭೆ ಚಾಪೆ ಒಳ್ಳೆಯದು. ಮೆದುವಾದ ಹತ್ತಿ ಬಟ್ಟೆ ಅಥವಾ ಕಂಬಳಿ ಅಥವಾ ರೇಷ್ಮೆ ಬಟ್ಟೆ ಇಲ್ಲವೆ ಹುಲಿ ಚರ್ಮ, ಬೆತ್ತದ ಚಾಪೆ ಒಳ್ಳೆಯದು.



9) **ಆಸನಗಳು :** ಕೂರ್ಮಾಸನ, ಪದ್ಮಾಸನ, ಸಿದ್ಧಾಸನ, ಸ್ವಸ್ತಿಕಾಸನ, ಸುಖಾಸನ ಮತ್ತು ವೀರಾಸನ,

10) **ಜಪಮಾಲೆ :** 108 ಮಣಿಗಳು ಮತ್ತು ಮೇರು ಮಣಿ ಇರಬೇಕು. ಅದು ರುದ್ರಾಕ್ಷಿ, ಹವಳ, ಮುತ್ತು, ಸ್ಪಟಿಕ, ತುಳಸಿ ಮಾಲೆಯನ್ನು ಬಳಸಿರಿ. ಆದರೆ ರುದ್ರಾಕ್ಷಿ ಶ್ರೇಷ್ಠ. ಹೊಸ ಮಾಲೆಯನ್ನು ಪಂಚಗವ್ಯದಲ್ಲಿ ನೆನಸಬೇಕು. ಮಾಡಿದ ಜಪ ಸಂಖ್ಯೆಯನ್ನು ಏಣಿಸುವುದಕ್ಕೆ ಕೈ ಬೆರಳು ಸಂಧಿ ಅಂದರೆ ಕೀಲುಗಳ ಮಧ್ಯದ ಜಾಗ ಇದನ್ನು ಕರಮಾಲೆ ಎನ್ನುತ್ತಾರೆ. ಅದನ್ನು ಉಪಯೋಗಿಸಬಹುದು.

11) **ಜಪ ಅಥವಾ ಭಗವನ್ನಾಮದ ಪುನರುಚ್ಚಾರಣೆ :** ಜಪವನ್ನು ಎಲ್ಲಾ ಕಾಲದಲ್ಲಿ ಮಾಡಬಹುದು. ಮಂತ್ರ ಉಚ್ಚರಣೆಯನ್ನು ಮನಸ್ಸಿನಲ್ಲಿ ಮಾಡಬೇಕು. ತುಟಿ ಮುಚ್ಚಿರಬೇಕು. ನಾಲಗೆ ಮಧ್ಯದಲ್ಲಿರಲಿ, ಕಣ್ಣು ಮುಚ್ಚಿರಬೇಕು. ಮಂತ್ರವು ಹೃದಯದ ಕಣ್ಣಿಗೆ ಕಾಣುತ್ತಿರಬೇಕು. ಮಂತ್ರವನ್ನು ಗಟ್ಟಿಯಾಗಿ ಹೇಳುವುದು, ಉಪಾಂಶು ಪಿಸುಗುಟ್ಟುವ ಧ್ವನಿಯಲ್ಲಿ ಹೇಳಬಾರದು.

12) ಜಪ ಮಾಲೆಯನ್ನು ಬಲಗೈಯಲ್ಲಿ ಹಿಡಿಯಬೇಕು. ಹೃದಯದ ಹತ್ತಿರ ಇರಬೇಕು. ಮಧ್ಯದ ಬೆರಳು ಆಧಾರ ಅನಾಮಿಕ ಬೆರಳು ಆಶ್ರಯ, ಮಣಿಗಳ ಮೇಲೆ ಹೆಬ್ಬೆರಳು ಇರಬೇಕು. ಒಂದು ಮಣಿ ದಾಟುವಾಗ ಒಂದು ಮಂತ್ರ ಮನಸ್ಸಿನಿಂದ ಉಚ್ಚಾರ ಮಾಡಬೇಕು. ಇದೇ ಮಂತ್ರ ಜಪ, ಮೇರು ಮಣಿಯನ್ನು ಬಿಟ್ಟು ಮುಂದಿನ ಮಣಿಯಿಂದ ಪ್ರಾರಂಭಿಸಿ ಒಂದೊಂದು ಮಂತ್ರಕ್ಕೆ ಒಂದೊಂದು ಮಣಿಯನ್ನು ಹಿಂದಕ್ಕೆ ಹೆಬ್ಬೆರಳಿನಿಂದ ಕಳಿಸಬೇಕು. ಮೇರು ಮಣಿ ಬಂದ ತಕ್ಷಣ ಅದನ್ನು ದಾಟದೆ ಜಪ ಮಾಲೆಯನ್ನು ಹಿಂದಿರುಗಿಸಿ ಪುನಃ ಮಾಡಬೇಕು.

ಈ ಮೇಲಿನ 12 ನಿಯಮಗಳನ್ನು ಮರೆಯದೆ ಜಪ ಮಾಡಿರಿ. ಇದರಿಂದ ನಿಮ್ಮ ಮಾಂಸಮಯ ಶರೀರವು ಮಂತ್ರಮಯವಾಗುತ್ತದೆ. ನಿಮ್ಮ ಉನ್ನತಿಯನ್ನು ನೀವೇ ಸಾಧಿಸಿಕೊಂಡು ನಿಮ್ಮನ್ನು ನೀವೇ ಉದ್ಧಾರ ಮಾಡಿಕೊಂಡು ಶಾಂತಿ ಜೀವನವನ್ನು ಪಡೆದು ಮುಕ್ತರಾಗಿರಿ.

# ಶ್ರದ್ಧೆ

**– ಶ್ರೀಮತಿ ವಿಜಯಲಕ್ಷ್ಮಿ, ಬೆಂಗಳೂರು**

**"ಶ್ರದ್ಧಾವಾನ್ ಲಭತೇ ಜ್ಞಾನಂ"** ಎಂಬಂತೆ ಗುರು ಶಾಸ್ತ್ರದಲ್ಲಿ ಶ್ರದ್ಧೆಯುಳ್ಳವನಿಗೆ ಜ್ಞಾನವು ದೊರೆಯುತ್ತದೆ. ಶ್ರದ್ಧೆಯಿಂದ ಕರ್ತವ್ಯವನ್ನು ಮಾಡುವವನಿಗೆ ಪರಮೇಶ್ವರನೂ ಸಹಾಯ ಮಾಡುತ್ತಾನೆ. ಶ್ರದ್ಧೆಯ ಉತ್ಸಾಹದ ಬೀಜ. ಶ್ರದ್ಧೆ ಇರುವಲ್ಲಿ ಉತ್ಸಾಹವಿರಲೇಬೇಕು.

**ಉದಾ.:** ಆಂಜನೇಯಸ್ವಾಮಿಯು ಶ್ರದ್ಧೆಯಿಂದಲೇ ಸಮುದ್ರವನ್ನು ದಾಟಿದನು. ಮೀರಾಬಾಯಿಯ ಶ್ರದ್ಧೆಯೇ ವಿಷವನ್ನು ಅಮೃತವನ್ನಾಗಿ ಮಾಡಿತು. ಪ್ರಹ್ಲಾದನ ಶ್ರದ್ಧೆಯು ಅಗ್ನಿಯನ್ನು ತಣ್ಣಗೆ ಮಾಡಿತು. ಮಾರ್ಕಂಡೇಯನ ಶ್ರದ್ಧೆಯು ಅಮೃತತ್ವವನ್ನು ತಂದುಕೊಟ್ಟಿತು.

**ಶ್ರದ್ಧೆಯಲ್ಲಿ ಮೂರು ರೀತಿ :** 1) ಸಾತ್ವಿಕ ಶ್ರದ್ಧೆ, 2) ರಾಜಸಿಕ ಶ್ರದ್ಧೆ, 3) ತಾಮಸಿಕ ಶ್ರದ್ಧೆ

ಸಾತ್ವಿಕ ಸ್ವಭಾವದಿಂದ ಹುಟ್ಟಿದ ಶ್ರದ್ಧೆಯು ಸಾತ್ವಿಕ ಶ್ರದ್ಧೆ ಎನ್ನಿಸಿಕೊಳ್ಳುತ್ತದೆ. ರಾಜಸಿಕ ಸ್ವಭಾವದಿಂದ ಹುಟ್ಟಿದ ಶ್ರದ್ಧೆಯು ರಾಜಸಿಕ ಶ್ರದ್ಧೆ ಎಂದೂ, ತಾಮಸಿಕ ಸ್ವಭಾವದಿಂದ ಹುಟ್ಟಿದ ಶ್ರದ್ಧೆಯು ತಾಮಸಿಕ ಶ್ರದ್ಧೆ ಎನ್ನಿಸುತ್ತದೆ. ಹೀಗಿರುವುದರಿಂದ ಅವರವರ ಶ್ರದ್ಧೆಯಿಂದಲೇ ಅವರವರ ನಿಷ್ಠೆಯನ್ನು ಊಹಿಸಿ ತಿಳಿದುಕೊಳ್ಳಬಹುದು.

**ಯಜಂತೇ ಸಾತ್ವಿಕಾ ದೇವಾನ್ ಯಕ್ಷರಕ್ಷಾಂಸಿ ರಾಜಸಾಃ ।**

**ಪ್ರೇತಾನ್ಭೂತ ಗಣಾಂಶ್ಚನ್ಯೆ ಯಜಂತೇ ತಾಮಸಾಃ ಜನಾಃ ॥**

ದೇವತೆಗಳನ್ನು ಪೂಜಿಸುವವರು ಸಾತ್ವಿಕರು, ಯಕ್ಷರಾಕ್ಷಸರನ್ನು ಪೂಜಿಸುವವರು ರಾಜಸಿಕರು, ಭೂತಪ್ರೇತಗಳನ್ನು ಪೂಜಿಸುವವರು ತಾಮಸಿಕರೆಂದು ತಿಳಿಯಬೇಕು.

**1) ಸಾತ್ವಿಕ ಶ್ರದ್ಧೆ :**

ಸಾತ್ವಿಕ ಶ್ರದ್ಧೆಯುಳ್ಳವರು ಸಾತ್ವಿಕ ಕರ್ಮಗಳನ್ನೇ ಮಾಡುತ್ತಾರೆ. ಸಾತ್ವಿಕ ಶ್ರದ್ಧೆಯು ವಿಚಾರಾತ್ಮಕವಾದ ಸತ್ಯ. ವಿವೇಕದಿಂದ ಕೂಡಿದ ಸಮತೆ, ಶುದ್ಧ ಭಾವ. ತನ್ನ ಸ್ವರೂಪವಾದ ಶಿವಾರ್ಪಣ ಬುದ್ಧಿಯಿಂದ ಕರ್ಮ ಮಾಡುವುದು. ಇವುಗಳು ಸಾತ್ವಿಕ ಶ್ರದ್ಧೆಯುಳ್ಳ ಮನಸ್ಸಿಗೂ ದೇವನಿಗೂ ನಿತ್ಯ ಸಂಬಂಧವಿರುತ್ತದೆ. ಸಾತ್ವಿಕ ಶ್ರದ್ಧೆಯುಳ್ಳವರು ಜಗತ್ತಿನಲ್ಲಿ ಸರ್ವ ಪದಾರ್ಥಗಳಲ್ಲಿಯೂ ತನ್ನ ಆರಾಧ್ಯ ದೈವವನ್ನೇ ಕಾಣುತ್ತಾರೆ. ಇದು ಸಾತ್ವಿಕ ಶ್ರದ್ಧೆಯ ಲಕ್ಷಣ.

**2) ರಾಜಸಿಕ ಶ್ರದ್ಧೆ :**

ಯಾರು ಸ್ವಾರ್ಥದಲ್ಲಿ ಮುಳುಗಿರುವರೋ, ಯಾರ ಜ್ಞಾನವು ಕಾಮ, ಕ್ರೋಧ, ಲೋಭ, ಮೋಹ, ಮೊದಲಾದ ವಿಕಾರಗಳಿಂದ ಆವರಿಸಲ್ಪಟ್ಟಿದೆಯೋ ಅಂತಹವರೇ ರಾಜಸಿಕ ಪುರುಷರು. ಇವರುಗಳು ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ಯಕ್ಷ ರಾಕ್ಷಸರನ್ನು ಪೂಜಿಸುತ್ತಾರೆ. ರಾಜಸಿಕ ವ್ಯಕ್ತಿಗಳು ಎಂತಹಾ ದುರ್ಗುಣಗಳನ್ನು ಹೊಂದಿರುವವರೇ ಆಗಲೀ, ಧನಿಕರನ್ನೂ ಅಸತ್ ಕರ್ಮಗಳನ್ನು ಮಾಡುವವರನ್ನು ಸೇವಿಸುತ್ತಾರೆ. ಇವರೇ ರಾಜಸಿಕ ಶ್ರದ್ಧೆಯುಳ್ಳವರು.

**3) ತಾಮಸಿಕ ಶ್ರದ್ಧೆ :**

ತಾಮಸಿಕ ಸ್ವಭಾವದ ಜನರು ಭೂತ ಪ್ರೇತಗಳನ್ನು ಪೂಜಿಸುತ್ತಾರೆ. ಈ ಮಾರ್ಗವನ್ನು ಹಿಡಿದ ಜನರು ಅತ್ಯಂತ ನಿಂದಿತ ಕರ್ಮಗಳನ್ನು ಮಾಡುತ್ತಾರೆ. ತಾಮಸ ಶ್ರದ್ಧೆಯುಳ್ಳ ನರನಾರಿಯರು ಹೀನ ಜನರ ಉಪಾಸನೆಯಲ್ಲಿ ತೊಡಗುತ್ತಾರೆ. ಅಂತಹವರಿಗೆ ಮದ್ಯಪಾನ, ಪರನಿಂದಾ, ಅಭಕ್ಷ್ಯ ಭಕ್ಷಣಗಳು ಇವರಿಗೆ ಬಹಳ ರುಚಿಯಾಗಿರುತ್ತವೆ. ಸ್ಮಶಾನಕ್ಕೆ ಹೋಗುವ ನಾಲ್ಕು ದಾರಿಗಳ ಕೂಟ ಇದೇ ಅವರಿಗೆ ಪೂಜೆ ಮಾಡಲು ಯೋಗ್ಯವಾದ ಸ್ಥಾನಗಳು. ಇವರುಗಳೇ ತಾಮಸಿಕ ಶ್ರದ್ಧೆಯುಳ್ಳ ಜನರು. ಮನುಷ್ಯರು ಯಾವ ವಸ್ತುವಿನಲ್ಲಿ ಶ್ರದ್ಧೆಯಿಡುವರೋ ಅವರೂ ಅದರಂತೆಯೇ ಆಗುತ್ತಾರೆ. **"ಶ್ರದ್ಧಾ ಮಯೋಯಂ ಪುರುಷೋ ಯೋ ಯಚ್ಛ್ರದ್ಧಃ ಸ ಏವಸಃ"** ಮನುಷ್ಯನು ಶ್ರದ್ಧಾಮಯನು ಶ್ರದ್ಧೆಯಂತೆ ಆಗುತ್ತಾನೆ ಎಂದು ಭಗವಂತನು ಹೇಳುತ್ತಾನೆ. ಇದು ಪರಮ ಸತ್ಯ ಭಗವತ್ ಸ್ವರೂಪವನ್ನು ಪಡೆಯಬೇಕಾದರೆ ಭಗವಂತನಲ್ಲಿ ಅಚಲ ಶ್ರದ್ಧೆಯಿರಬೇಕು. ಪುಣ್ಯಶಾಲಿಗಳಾದ ಸಾತ್ವಿಕ ಶ್ರದ್ಧೆಯುಳ್ಳ ಇಹಲೋಕದಲ್ಲಿ ಸುಖವನ್ನು ಪರಲೋಕದಲ್ಲಿ ಸದ್ಗತಿಯನ್ನೂ ಪಡೆಯುವುದಕ್ಕೆ ಇವರುಗಳು ಯಾವಾಗಲೂ ದೈವೀ ಕರ್ಮಗಳನ್ನೇ ಮಾಡುತ್ತಿರುತ್ತಾರೆ. ಅವರುಗಳು ಕುಮಾರ್ಗದಲ್ಲಿ ಕಾಲನ್ನೇ ಇಡುವುದಿಲ್ಲ. ರಾಜಸಿಕ ಶ್ರದ್ಧೆಯುಳ್ಳವರು ಸ್ವಾರ್ಥ ಕಾಮನೆಯಿಂದ ಪ್ರೇರಿತರಾಗಿ ವಿಶ್ವಾಸದಿಂದ ರಾಗಾತ್ಮ ಕರ್ಮಗಳನ್ನೇ ಮಾಡುತ್ತಿರುತ್ತಾರೆ. ಅವರು ಪರಮಾತ್ಮನನ್ನು ಬಿಟ್ಟು ಜಡವನ್ನೇ ಆಶ್ರಯಿಸಿರುತ್ತಾರೆ. ಅವರಿಗೆ ಒಂದು ಲಕ್ಷ್ಯವಿಲ್ಲ ಗುರು ಇಲ್ಲದೆ ತಿರುಗಾಡುವುದೇ ಇವರ ಕೆಲಸ. ಅವರು ಯಾವಾಗಲೂ ಪಾರಮಾರ್ಥದಿಂದ ದೂರರೇ. ಇನ್ನು ತಾಮಸೀ ಶ್ರದ್ಧೆಯುಳ್ಳವರು ಯಾವಾಗಲೂ ಅಂದರೆ ಸದಾ ದುಃಖಿಗಳಾಗಿರುತ್ತಾರೆ. ಮನುಷ್ಯರಲ್ಲಿ ಯಾವ ಯಾವ ಗುಣಗಳಿರುತ್ತದೆಯೋ ಅದರಂತೆ ಅವರವರ ಶ್ರದ್ಧೆಯೂ ಉಂಟಾಗುತ್ತದೆ.



**"ಶ್ರದ್ಧಾ ಮಯೋಽಯಂ ಪುರುಷಃ"** ಎಂದು ಭಗವದ್ಗೀತೆಯ 17ನೇ ಅಧ್ಯಾಯದಲ್ಲಿ ಹೇಳಿದೆ. ಅಂದರೆ ಮನುಷ್ಯನು ಶ್ರದ್ಧಾಮಯನು, ಗುಣಮಯನು, ಸಂಸ್ಕಾರಮಯನೆಂದು ಹೇಳಿಸಿಕೊಳ್ಳುತ್ತಾನೆ. ಗುಣವನ್ನು ಬದಲಾಯಿಸಲಾರದೆ ಶ್ರದ್ಧೆಯನ್ನು ಬದಲಾಯಿಸಲಾಗದು. ಶ್ರದ್ಧೆಯನ್ನು ಬದಲಾಯಿಸಲಾರದೆ ಸಂಸ್ಕಾರವನ್ನು ಬದಲಾಯಿಸಲಾಗದು. ಸಂಸ್ಕಾರವನ್ನು ಬದಲಾಯಿಸಲಾರದೆ ವ್ಯವಹಾರವನ್ನು ಬದಲಾಯಿಸಲಾಗದು. ಆದುದರಿಂದ ಮನುಷ್ಯನಾದವನಿಗೆ ಶ್ರದ್ಧೆಯೊಂದನ್ನು ತಮೋ ಗುಣದಿಂದ ರಾಜಸಿಕ ಗುಣಕ್ಕೂ, ರಾಜಸಿಕ ಗುಣದಿಂದ ಸಾತ್ವಿಕ ಗುಣಕ್ಕೂ ಬದಲಾಯಿಸಿಕೊಳ್ಳುವ ಶಕ್ತಿ ಮಾನವನಿಗೆ ಮಾತ್ರ ಲಭ್ಯ. ಆದುದರಿಂದ ಆತ್ಮೀಯರೆ, ನಿಮ್ಮ ನಿಮ್ಮ ಗುಣಗಳನ್ನು ಗುರುತಿಸಿ ಎಲ್ಲರೂ ಸಾತ್ವಿಕ ಶ್ರದ್ಧೆಯುಳ್ಳವರಾಗಬೇಕಾಗಿ ಕೋರುತ್ತೇನೆ.

ಶ್ರದ್ಧೆ ಇರಬೇಕಾದುದು ಶ್ರೇಷ್ಠವೇ, ಆದರೆ ಅದು ಅಂಧ ಶ್ರದ್ಧೆಯಾಗಿರಬಾರದು, ವಿವೇಕದಿಂದ ಕೂಡಿರಬೇಕು. ಸರ್ವರಿಗೂ ಮೊದಲು ವಿವೇಕಯುಕ್ತವಾದ ಆತ್ಮಶ್ರದ್ಧೆ ಇರಬೇಕು. ಶ್ರದ್ಧೆ ಇಲ್ಲದೆ ಮಾಡಿದ ಕರ್ಮವು ಅದು ಎಂತಹಾ ಶ್ರೇಷ್ಠವಾದುದಾದರೂ ಅದು ಅಸತ್ತು ಎನ್ನಿಸಿಕೊಳ್ಳುತ್ತದೆ. ವಿಧಿಗೆ ಅನುಸರಿಸಿ ಮಾಡಿದ ಮಂತ್ರ ಜಪವೂ, ಕೊಟ್ಟ ಧನವೂ, ಸಾತ್ವಿಕ ಶ್ರದ್ಧೆ ಎನ್ನಿಸಿಕೊಳ್ಳುತ್ತದೆ. ಶ್ರದ್ಧೆಯು ಸಾತ್ವಿಕವಾಗಿರಬೇಕಾದರೆ ಸತ್‌ಸಂಗವೂ ಪರಮೇಶ್ವರನ ಚಿಂತನೆಯೂ ಅತ್ಯಗತ್ಯ. ಜ್ಞಾನ ಸಹಿತವಾದ ಶ್ರದ್ಧೆಯಿಂದ ಮಾಡುವ ಕರ್ಮಗಳೆಲ್ಲವೂ ದೈವೀ ಕರ್ಮಗಳು. ಅವುಗಳಿಂದ ಭಗವತ್ ಪ್ರಾಪ್ತಿ ಸುಲಭವಾಗಿ ಆಗುತ್ತದೆ. ನೆನಪಿನಲ್ಲಿಟ್ಟುಕೊಳ್ಳಬೇಕಾದ ಅಂಶವೇನೆಂದರೆ ಶ್ರದ್ಧಾಪೂರ್ವಕವಾಗಿ ಪರಮೇಶ್ವರನ ಸ್ಮರಣೆ ಮಾಡುವುದರಿಂದ ಪಾಪಿಯ ಪಾಪವು ಭಸ್ಮವಾಗುತ್ತದೆ. ಜ್ಞಾನಿಯ ಜ್ಞಾನವು ಸಾರ್ಥಕವಾಗಿ ಆತ್ಮ ಸಾಕ್ಷಾತ್ಕಾರವನ್ನು ಮಾಡುತ್ತದೆ.

**ಓಂ ತತ್ಸತ್**